## 11

# ದೇವರ ಶಿಕ್ಷೆಯನ್ನು ಕೃಪೆಯಿಂದ ಸ್ವೀಕರಿಸುವುದು

## (2 ಸಮುವೇಲ 15-20)

ಇಬ್ರಿಯ 12ರಲ್ಲಿ ಮಾತನಾಡುವ ಕರ್ತನ ಶಿಕ್ಷೆ ಎಂಬ ವಿಷಯವು, ನಮಗೆ ಹಿತಕರ ಅನ್ನಿಸುವದಿಲ್ಲ;

ಯಾರಿಗೆ ಈ ವಿಷಯದ ಇಬ್ರಿಯ ಪತ್ರಿಕೆಯು ತಲುಪಿತೋ. ಅವರು ಬೇಸರ ಪಟ್ಟು, ಹಿಂದೆ ಸರಿದರು. ಅವರುಗಳು ಮರೆತು ಹೋದಂಥ ಸಂಗತಿಯನ್ನು ಬರಹಗಾರನು ಅವರ ನೆನಪಿಗೆ ತಂದನು:

> ... ಮಕ್ಕಳಿಗೆ ಹೇಳುವಂತೆ ನಿಮಗೆ ಹೇಳಿದ ಎಚ್ಚರಿಕೆಯ ಮಾತನ್ನು ಮರೆತು ಬಿಟ್ಟಿದ್ದೀರೋ?
>
> ಏನಂದರೆ - ಮಗನೇ, ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ;
> ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ; *ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ;* ಎಂಬದು.
>
> ... ನೀವು ಶಿಕ್ಷಿತರಾಗುವದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ; ದೇವರು ನಿಮ್ಮನ್ನು ಮಕ್ಕಳೆಂದು ನಡಿಸುತ್ತಾನೆ. ತಂದೆಯಿಂದ ಶಿಕ್ಷೆಹೊಂದಿದ ಮಗನೆಲ್ಲಿ? ಮಕ್ಕಳೆಲ್ಲರೂ ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರದಿಂದ ಹುಟ್ಟಿದವರೇ ಹೊರತು ಪುತ್ರರಲ್ಲ. ಇದು ಮಾತ್ರವಲ್ಲದೆ ನಮ್ಮನ್ನು ಶಿಕ್ಷಿಸಿದಂಥ ಶರೀರ ಸಂಬಂಧವಾದ ತಂದೆಗಳನ್ನು ಸನ್ಮಾನಿಸಿದೆವಷ್ಟೆ; ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನಿಗೆ ನಾವು ಇನ್ನೂ ಹೆಚ್ಚಾಗಿ ಒಳಪಟ್ಟು ಜೀವಿಸಬೇಕಲ್ಲವೇ! ಆ ತಂದೆಗಳು ಕೆಲವು ದಿವಸಗಳ ಪ್ರಯೋಜನವನ್ನು ಲಕ್ಷ್ಯಕ್ಕೆ ತೆಗೆದುಕೊಂಡು ತಮ್ಮ ಮನಸ್ಸಿಗೆ ತೋಚಿದಂತೆ ನಮ್ಮನ್ನು ಶಿಕ್ಷಿಸಿದರು; ಆತನಾದರೋ ನಾವು ತನ್ನ ಪರಿಶುದ್ಧತೆಯಲ್ಲಿ ಪಾಲುಗಾರರಾಗಬೇಕೆಂದು ನಮ್ಮ ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ. ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಖಕರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತದೆ (ಇಬ್ರಿಯ 12:5-11; ಒತ್ತಿ ಹೇಳಿದ್ದು ನನ್ನದು).

ಯಾಕೆ ಸಮಸ್ಯೆಗಳು ನಮ್ಮ ಹಾದಿಗೆ ಬರುತ್ತವೆ ಎಂದು ಯಾವಾಗಲೂ ನಮಗೆ ಅರ್ಥವಾಗುವದಿಲ್ಲ, ಆದರೆ ಇಬ್ರಿಯ 12 ತಿಳಿಸುತ್ತದೆ, ಕಷ್ಟದ ದಿನಗಳು ಬರುವಾಗ ಅದನ್ನು ಕೃಪೆಯಿಂದ ಸ್ವೀಕರಿಸಬೇಕು. ನಾವು "ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನಿಗೆ ನಾವು ಇನ್ನೂ ಹೆಚ್ಚಾಗಿ ಒಳಪಡಬೇಕು" (ವಚನ 9). ನಾವು ನಮ್ಮ ಹೃದಯವನ್ನು ದೇವರ ಹಾದಿಗೆ ತಿರುಗಿಸ ಬೇಕು. ಅದನ್ನು ಮಾಡಿದರೆ ಅಂತ್ಯದಲ್ಲಿ, ನಾವು ದೈವ ಭಕ್ತರಾಗುತ್ತೇವೆ. ಬೇರೆಯಾವ ಮಾರ್ಗದಲ್ಲಿಯೂ ಕಾಣದ ಸಮಾಧಾನವನ್ನು ಕೊನೆಯಲ್ಲಿ ಪಡಕೊಳ್ಳುತ್ತೇವೆ. "ಸಮಾಧಾನದ ಫಲವಾದ ನೀತಿಯು" ಬೆಳೆದು ನಮ್ಮ ಜೀವಿತವನ್ನು ಸಮೃದ್ಧಿ ಪಡಿಸುತ್ತದೆ (ವಚನ 11).

"ದೇವರ ಶಿಕ್ಷೆಯನ್ನು ಕೃಪೆಯಿಂದ ಸ್ವೀಕರಿಸುವದು" ಎಂಬ ಚರ್ಚಿನೀಯಾಂಶ, ದಾವೀದನ ಜೀವಿತದ ಮುಖ್ಯ ವಿಷಯವಾಗಿತ್ತು. ಈ ವಿಷಯಕ್ಕೆ ತೆರೆಯು ಸರಿಯಲ್ಪಟ್ಟಾಗ, ಅಬ್ಷಾಲೋಮನು, ಹೆಬ್ರೋನಿನಲ್ಲಿ ಅರಸನ ಸ್ಥಾನವನ್ನು ಹೊಂದಿದನು ಎಂಬ ವಾರ್ತೆಯು, ದಾವೀದನಿಗೆ ಮುಟ್ಟಿತು. ಸೈನ್ಯದ ಬಹುಭಾಗವು ಅವನನ್ನು ಹಿಂಬಾಲಿಸುತ್ತಾ, ಉತ್ತರ ದಿಕ್ಕಿನ ರಾಜಧಾನಿಯಾದ ಯೆರುಸಲೇಮಿಗೆ ಧಾವಿಸುತ್ತಿತ್ತು. ಈ ವಿಷಯವನ್ನು ದಾವೀದನು ಕೇಳಿ ಅರಮನೆಯಲ್ಲಿದ್ದವರಿಗೆ ಹೇಳಿದ್ದೇನೆಂದರೆ, "ಏಳಿರಿ, ಓಡಿ ಹೋಗೋಣ; ಇಲ್ಲೇ ಇದ್ದರೆ ನಾವು ಅಬ್ಷಾಲೋಮನ ಕೈಯಿಂದ ತಪ್ಪಿಸಿಕೊಳ್ಳಲಾರೆವು" (2 ಸಮುವೇಲ 15:14).

ಬೇಗನೇ ಅವನ ಮನೆಯವರೆಲ್ಲರು ಪಟ್ಟಣವನ್ನು ತೊರೆದರು. ಅವರು ಯೋರ್ದೋನ್ ಹೊಳೆಯನ್ನು, ಅವರಿಗೂ ಅಬ್ಷಾಲೋಮನ ಸೈನ್ಯರ ನಡುವೆ ಇರುವಂತೆ ನೋಡಿಕೊಳ್ಳಲು ಪೂರ್ವಕ್ಕೆ ಪ್ರಯಾಣಿಸಿದರು. ದಾವೀದನು ಎಣ್ಣೇ ಮರಗಳ ಗುಡ್ಡವನ್ನು ಹತ್ತುವಾಗ, ಪಟ್ಟಣದಲ್ಲಿ ಉಂಟಾಗುತ್ತಿದ್ದ ರೋಧನೆಯನ್ನು ಕೇಳಿಸಿಕೊಂಡನು.

> ದಾವೀದನು ಮೋರೆಯನ್ನು ಮುಚ್ಚಿಕೊಂಡು ಅಳುತ್ತಾ ಬರಿಗಾಲಿನಿಂದ ಎಣ್ಣೇ ಮರಗಳ ಗುಡ್ಡವನ್ನೇರಿದನು. ಅವನ ಜೊತೆಯಲ್ಲಿದ್ದ ಜನರೂ ಮೋರೆ ಮುಚ್ಚಿಕೊಂಡು ಅಳುತ್ತಾ ಏರಿದರು (15:30).

ದಾವೀದನು ಏಕೆ ಅಳುತ್ತಿದ್ದನು ಎಂದು ನಾವು ಕೇಳುವದಾದರೆ ಅವನ ಉತ್ತರವು ಈ ರೀತಿ ಇರಬಹುದು: "ನಾನು ತಂದೆಯಾಗಿ ಕಾರ್ಯನಿರ್ವಹಿಸಲು ಅನರ್ಹನಾದ್ದರಿಂದ, ಈಗ ನನ್ನ ಮಗನು ನನ್ನ ಜೀವಕ್ಕಾಗಿ ಹೊಂಚು ಹಾಕುವಂಥಾಯಿತು. ಇದಕ್ಕಾಗಿ ಅಳುತ್ತಿದ್ದೇನೆ. ನನ್ನ ಪಾಪವು ನನ್ನನ್ನು ಮಾತ್ರ ಅಪಾಯದೆಡೆಗೆ ನಡೆಸದೆ, ನಾನು ಪ್ರೀತಿ ಸುವಂಥವರನ್ನು ಅಪಾಯಕ್ಕೆ ನಡೆಸಿದ್ದರಿಂದ ನಾನು ಅಳುತ್ತಿದ್ದೇನೆ. ದೇವರ ಪಟ್ಟಣ ಹಾಗೂ ಅದರ ನಿವಾಸಿಗಳು ತೊಂದರೆ ಗೀಡಾಗಿರುವದರಿಂದ ಅಳುತ್ತಿದ್ದೇನೆ. ನಾನು ಅರವತ್ತು ವರ್ಷದವನಾಗಿದ್ದೇನೆ." ಮತ್ತು ನನ್ನ ಎಲ್ಲಾ ಸಾಧನೆಗಳು ವ್ಯರ್ಥವಾಯಿತು ಎಂದು ಅಳುತ್ತಿದ್ದೇನೆ. "ಅವನು ಸ್ವಲ್ಪ ಸಮಯವನ್ನು ತೆಗೆದುಕೊಂಡು, ನಂತರ ದೇವರ ಶಿಕ್ಷೆಯು ಗಂಭೀರವಾಗಿರುವದರಿಂದ ನಾನು ಅಳುತ್ತಿದ್ದೇನೆ" ಎಂದು ಸೇರಿಸಿ ಹೇಳುತ್ತಾನೆ.

ದಾವೀದನು ಜಜ್ಜಲ್ಪಟ್ಟು, ಬಳಲಿಹೋದ ಮನುಷ್ಯನಾಗಿದ್ದನು, ಅವನ ಪಾಪವು, ಅವನ ತಲೆಯ ಮೇಲೆ ಸುರಿಸಿದ್ದ ಬಿರುಗಾಳಿಯಿಂದ ತತ್ತರಿಸಿದ್ದನು. ಅವನ ಹೃದಯದಲ್ಲಿ ರಕ್ತ ಸುರಿಯುತ್ತಿತ್ತು. ಅವನು ಇನ್ನೂ ಪಾಪ ಪ್ರಜ್ಞೆಯಿಂದ ಬಳಲುತ್ತಿದ್ದನು. ಅವನ ಮನೆಯಿಂದಲೇ ಉದ್ಭವಿಸಿದ ಸಮಸ್ಯೆಯನ್ನು ಪರಿಹರಿಸಲು ಅಸಮರ್ಥನಾದನು. ಗಂಡಾಂತರ ಉಂಟಾದಾಗ, ಅದಕ್ಕೆ ಪ್ರತಿಕ್ರಿಯಿಸದೆ ತದ್ವಿರುದ್ಧವಾಗಿ ನಡಕೊಂಡನು. "ಏಳಿರಿ ತಪ್ಪಿಸಿಕೊಳ್ಳೋಣ" ಎಂಬುದಾಗಿ ಹೇಳಿದ ದಾವೀದನೇ ಎಣ್ಣೇ ಮರಗಳ ಇಳಿಜಾರನ್ನು ಹತ್ತುವಾಗ ಅಳುತ್ತಿದ್ದನು, ಇಲ್ಲಿ ಅವನು ಅರಸನಾಗಿ ಕಾಣುವದಕ್ಕಿಂತಲೂ, ಭಿಕ್ಷುಕನಂತೆ ಕಾಣುತ್ತಿದ್ದನು.

ಇದರ ಅರ್ಥ, ದಾವೀದನ ಅಂತ್ಯದ ಸೂಚನೆಯಾಗಿರಲಿಲ್ಲ - ಅಥವಾ ದೇವರ ಕಾರ್ಯವು ಅವನಲ್ಲಿ ಅಂತ್ಯವಾದವು ಎಂಬುದಾಗಿಯೂ ಅಲ್ಲ. ದಾವೀದನು ಬೆಳೆಸಲ್ಪಟ್ಟನೇ ಹೊರತು, ಹೊರ ಹಾಕಲ್ಪಟ್ಟವನಲ್ಲ. ಅವನು ಜಜ್ಜಲ್ಪಟ್ಟು, ವಿಚಲಿತನಾಗಿದ್ದರೂ, ಸಂಪೂರ್ಣ ನಾಶವಾಗಲಿಲ್ಲ, ನಾನು ಇದನ್ನು ಓದಿ ಮುಂದುವರಿಯುವಾಗ, ಈ ಸ್ಥಿತಿಯಲ್ಲಿಯೂ, ಅವನಿಗಿದ್ದ ಮನೋಭಾವವನ್ನು ನಾನು ಮೆಚ್ಚುತ್ತೇನೆ. ಅವನ ಜೀವಮಾನದ ಈ ದಿವಸಗಳನ್ನು ನಾನು ತಿರುಗಿ ನೋಡುವಾಗ ದಾವೀದನು ದೇವರ ಶಿಕ್ಷೆಯನ್ನು ಕೃಪೆಯಿಂದ ಸ್ವೀಕರಿಸಿದ್ದನ್ನು ನಾನು ನೋಡುತ್ತೇನೆ.

## ಅವನು ಇತರರ ಬಗ್ಗೆಯೂ ಕಾಳಜಿವುಳ್ಳವನಾಗಿದ್ದನು (15:18-22)

ತನ್ನ ಪರಿವಾರದವರೊಂದಿಗೆ, ದಾವೀದನು ಯೆರೂಸಲೇಮನ್ನು ಬಿಟ್ಟು ಹೋಗುವಾಗ, ಯೆರುಸಲೇಮಿನ ಕಡೆಯ ಮನೆಯ ಹತ್ತಿರ ನಿಂತುಕೊಂಡು ತನ್ನವರೆಲ್ಲರೂ ಹಾದು ಹೋಗು ವದನ್ನು ಗಮನಿಸುತ್ತಿದ್ದನು. ಕೊನೆಯಲ್ಲಿ, ಗಿತ್ತೀಯಾನಾದ ಇತ್ತೈ ಎಂಬುವನು ತನ್ನ ಜನ ರೊಂದಿಗೆ ಬಂದನು.[1] "ಗಿತ್ತೀಯರು" ಅಂದರೆ ಗಿತ್ತೈಯು ಗತ್ ಊರಿನವನು ಎಂಬ ಅರ್ಥ ಅವನು ಫಿಲಿಷ್ಟಿಯ ಸೈನ್ಯಾಧಿಕಾರಿಯಾಗಿದ್ದು, ತನ್ನ ಜನರ ಒಂದು ಸೈನ್ಯದ ತುಕಡಿಯು ದಾವೀದನ ಸೈನ್ಯದೊಂದಿಗೆ ಸೇರಿದ್ದನು. ದಾವೀದನು ಅವನನ್ನು ತಡೆದು ಹೇಳಿದ್ದೇನೆಂದರೆ,

> ನೀನೂ ನಮ್ಮ ಸಂಗಡ ಯಾಕೆ ಬರಬೇಕು? ನೀನು ಸ್ವದೇಶವನ್ನು ಬಿಟ್ಟು ನನ್ನ ಆಶ್ರಯಕ್ಕೆ ಬಂದವನಲ್ಲವೇ. ಹಿಂದಿರುಗಿ ಹೋಗಿ ಅರಸನ ಬಳಿಯಲ್ಲಿ ವಾಸ ಮಾಡು.[2] ನಾನು ಎಲ್ಲೆಲ್ಲಿಯೋ ಅಲೆಯುತ್ತಿರಬೇಕಾಗುವದು; ಹೀಗಿರುವದರಿಂದ ನಿನ್ನೆ ಬಂದಂಥ ನಿನ್ನನ್ನು ಕರಕೊಂಡು ಹೋಗಿ ಸುಮ್ಮನೆ ಯಾಕೆ ತಿರುಗಾಡಲಿಕ್ಕೆ ಹಚ್ಚಬೇಕು? ನಿನ್ನ ಸಹೋದರರನ್ನು ಕರಕೊಂಡು ಹಿಂದಿರುಗಿ ಹೋಗು; ಕೃಪಾಸತ್ಯತೆಗಳು ನಿನ್ನ ಸಂಗಡ ಇರಲಿ ಎಂದು ಹೇಳಿದನು (15:19, 20).

ಅಬ್ಷಾಲೋಮನನ್ನು ದಾವೀದನು, "ಅರಸನು" ಎಂದು ಕರೆದನು. ದಾವೀದನು ತನ್ನ ರಾಜ್ಯಬಾರವು ಇಲ್ಲಿಗೆ ಕೊನೆಯಾಯಿತು ಎಂದು ತಿಳಿದನು. ಮುಂದಿನ ಭವಿಷ್ಯದ ಬಗ್ಗೆ ಅವನಿಗೆ ಏನೂ ತಿಳಿದಿರಲಿಲ್ಲ. ಆ ಪರಿಸ್ಥಿತಿಯಲ್ಲಿಯ, ಒಂದು ಆಲೋಚನೆಯು, ಬಹುಶ ನನ್ನ ಕುರಿತಾಗಿಯೂ ಇರಬಹುದು: "*ನನ್ನಿಂದ* ಯಾವ ಕಾರ್ಯವು ಹೊರಬರಲು ಸಾಧ್ಯವಿದೆ?" ದಾವೀದನು ಇತ್ತೈಯನ್ನು ನೋಡಿದಾಗ, ಅವನು ಅವನ ಜನರು, ಅವನ ಕುಟುಂಬದವರು ಯಾವ ವಿಧವಾದ ಬಿಕ್ಕಟ್ಟಿನಲ್ಲಿ ಇದ್ದರು ಎಂದು ಯೋಚಿಸಿದನು. "ನೀನು ನನ್ನ ಜೊತೆ ಬರುವ ಅವಶ್ಯವಿಲ್ಲದೆ ಇರುವದರಿಂದ ನೀನು ಹಿಂದಿರುಗು. ನಾನು ಇದನ್ನು ಅರ್ಥಮಾಡಿಕೊಳ್ಳುತ್ತೇನೆ."

ಈ ದಾವೀದನ ಅನುಕಂಪದ ವಿಷಯವು ಬೈಬಲ್‌ನ ಯಥಾರ್ಥತೆಯ ಒಂದು ಪ್ರಾಮುಖ್ಯವಾದ ವಾಕ್ಯವನ್ನು ನೆನಪಿಗೆ ತರುತ್ತದೆ: "ಅದಕ್ಕೆ ಇತ್ತೈ ಯೆಹೋವನಾಣೆ, ನನ್ನ ಒಡೆಯನಾದ ಅರಸನ ಜೀವದಾಣೆ, ಜೀವಹೋದರೂ, ಉಳಿದರೂ ನನ್ನ ಒಡೆಯನಾದ ಅರಸನಿರುವಲ್ಲಿಗೆ ಹೋಗುವೆನು ಎಂದು ಉತ್ತರ ಕೊಟ್ಟನು" (15:21).

ಸಮಸ್ಯೆಯ ಸುಳಿಯಲ್ಲಿ ನಮ್ಮ ಜೀವಿತವು ಸಿಕ್ಕಿಕೊಳ್ಳುವಾಗ, ನಾವು ಕತ್ತಲಿನಲ್ಲಿ ಕೂತು ನಮ್ಮ ಗಾಯಗಳನ್ನು ನೆಕ್ಕುತ್ತ, "ನನ್ನ ಗತಿಯನ್ನು ಏನು ಹೇಳಲಿ" ಎಂದು ಹಾಡುವದು ನಮ್ಮ ಸ್ವಾಭಾವಿಕ ಪ್ರತಿಕ್ರಿಯೆಯಾಗಿರುತ್ತದೆ. ನಾವು ದೇವರ ಶಿಕ್ಷೆಯನ್ನು ಕೃಪೆಯಿಂದ ಸ್ವೀಕರಿಸುವವರಾದರೆ, ನಾವು ನಮ್ಮ ಸ್ವಾರ್ಥದಿಂದ ಎದ್ದು, ಇತರರ ಕೊರತೆಯ ಬಗ್ಗೆ ಚಿಂತಿಸಬೇಕಾಗುತ್ತದೆ. ಮುಖ್ಯವಾಗಿ, ನಮಗೆ ಉಂಟಾದ ಸಮಸ್ಯೆಯ ನಿಮಿತ್ತ ಯಾರು ಸಂಕಷ್ಟಕ್ಕೆ ಸಿಲುಕಿಕೊಂಡಿರುತ್ತಾರೋ ಅವರಿಗೆ.

## ಅವನು ತನ್ನ ಭವಿಷ್ಯವನ್ನು ದೇವರ ಕೈಗೆ ಒಪ್ಪಿಸಿದನು (15:23-29)

ಗಿತ್ತೀಯನಾದ ಇತ್ತೈಯು ಕಿದ್ರೋನ್ ಹಳ್ಳವನ್ನು ದಾಟಿದಾಗ, ಚಾದೋಕ್ ಮತ್ತು ಎಬ್ಯಾತಾರನು ಸಹ ಬಂದರು. ಆ ಇಬ್ಬರು ಯಾಜಕರನ್ನು ದಾವೀದನು ಗಿಬೆಯದಲ್ಲಿದ್ದ ದೇವದರ್ಶನದ ಗುಡಾರವನ್ನು ಮತ್ತು ಯೆರುಸಲೇಮಿನಲ್ಲಿದ್ದ ದೇವರ ಮಂಜೂಷವನ್ನು ಕಾಪಾಡಲು ನೇಮಿಸಿದ್ದನು. ಅವರ ಜೊತೆಯಲ್ಲಿ ಒಡಂಬಡಿಕೆಯು[3] ದೇವರ ಮಂಜೂಷವನ್ನು ಹೊರುವ ಲೇವಿಯರು ಸಹ ಇದ್ದರು. ಅವರೂ ಸಹ ಅರಸನೊಂದಿಗೆ ಹೊರಡಲು ಸಿದ್ಧವಾಗಿದ್ದರು, ಅದಕ್ಕೆ ದಾವೀದನು ಹೇಳಿದ್ದೇನೆಂದರೆ,

ನೀನು ದೇವರ ಒಡಂಬಡಿಕೆ ಮಂಜೂಷವನ್ನು ಹಿಂದಿರುಗಿ ತೆಗೆದುಕೊಂಡು ಹೋಗು; ಯೆಹೋವನ ದೃಷ್ಟಿಯಲ್ಲಿ ನನಗೆ ದಯೆದೊರಕಿದರೆ ನಾನು ಆತನನ್ನೂ ಆತನ ಆಲಯವನ್ನೂ ನೋಡುವ ಹಾಗೆ ತಾನೇ ನನ್ನನ್ನು ಹಿಂದಕ್ಕೆ ಬರಮಾಡುವನು. ಆತನು - ನಿನ್ನಲ್ಲಿ ನನಗೆ ಇಷ್ಟವಿಲ್ಲವೆಂದು ತೋರಿಸಿದರೆ ತನಗೆ ಸರಿಕಂಡಂತೆ ಮಾಡಲಿ, ಆತನ ಚಿತ್ತ ಅಂದನು (15:25, 26).

ದೇವರ ಮಂಜೂಷವನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುವದು ಶುಭ ಸಂಕೇತವಲ್ಲ ಎಂದು ದಾವೀದನು ತಿಳಿದಿದ್ದನು. ಅದು ಯೆರುಸಲೇಮಿನಲ್ಲಿಯೇ ನೆಲಸಿ, ಸತ್ಯವಾದ ಅರಸನು ಯೆಹೋವನೇ ಎಂದು ಜನರಿಗೆ ನೆನಪು ಮಾಡುತ್ತಿತು. ಬಹಳವಾಗಿ ಸ್ಪರ್ಶಿಸುವ ದಾವೀದನ ಸದ್ಗುಣದ ಮನೋಭಾವನೆಯ, ನಿಶ್ಚಯದ ಮಾತುಗಳನ್ನು ಗಮನಿಸಿ. ದೇವರ ಶಿಕ್ಷೆಯನ್ನು ಕೃಪೆಯಿಂದ ಸ್ವೀಕರಿಸುವ ವಿಷಯದ ವಿವರಣೆಯನ್ನು ಇನ್ನೊಂದು ಸಾರಿ ಓದಿರಿ:

ನನಗೆ ದಯೆದೊರಕಿದರೆ ನಾನು ಆತನನ್ನೂ ಆತನ ಆಲಯವನ್ನೂ ನೋಡುವ ಹಾಗೆ ತಾನೇ ನನ್ನನ್ನು ಹಿಂದಕ್ಕೆ ಬರಮಾಡುವನು. ನನಗೆ ಅವನು ಎರಡನ್ನೂ (ಮಂಜೂಷ) (ದೇವರ ಸನ್ನಿಧಿಯಾದ ಯೆರೂಸಲೇಮ) ನೋಡುವ ಹಾಗೆ ಮಾಡುವೆನು. ಆತನು - ನಿನ್ನಲ್ಲಿ ನನಗೆ ಇಷ್ಟವಿಲ್ಲವೆಂದು ತೋರಿಸಿದರೆ ತನಗೆ ಸರಿಕಂಡಂತೆ ಮಾಡಲಿ, ಆತನ ಚಿತ್ತ ಅಂದನು (15:25, 26).

ದಾವೀದನು ಗೊಲ್ಯಾತನನ್ನು ಕೊಂದಂಥ ಅದ್ಭುತವನ್ನು ನಾವು ನೋಡಿದ್ದೇವೆ. ಆತನ ವೈರಿಯಾದ ಸೌಲನಿಗೆ ಕೇಡು ಮಾಡದೆ ಬಿಟ್ಟು ಬಿಟ್ಟ ಆಶ್ಚರ್ಯವನ್ನು ನಿಂತು ಗಮನಿಸಿದ್ದೇವೆ, ಅವನು ರಾಜ ತಾಂತ್ರಿಕನಾಗಿಯೂ, ಒಳ್ಳೆಯ ಸೈನಿಕನಾಗಿಯೂ ಇದ್ದದ್ದನ್ನು ನೋಡಿ ಚಕಿತ ರಾಗಿದ್ದೇವೆ. ಅವನು ದೇವರಿಗೆ ನಂಬಿಗಸ್ತನಾಗಿದ್ದರಿಂದ ಇವೆಲ್ಲಾ ಸಾಧಿಸಲು ಸಾಧ್ಯವಾಯಿತು. ಆದರೆ ಈಗ ದಾವೀದನು ಒಡೆದು, ಹೃದಯ ಮುರಿಯಲ್ಪಟ್ಟಿದ್ದನು. ನಾವು ಈಗ ಅವನಲ್ಲಿ ಹಿಂದೆ ಕಾಣದ ಇದ್ದ *ಸಂಗತಿಯನ್ನು* ನೋಡುತ್ತೇವೆ. ಅವನಲ್ಲಿ ಪ್ರೌಢತ್ವವನ್ನು ಕಾಣುತ್ತೆವೆ. "ದೇವರೇ ನನಗೆ ಜಯಕೊಡು" ಎಂದು ಭಿನ್ನವಿಸಲಿಲ್ಲ. "ದೇವರೇ ನಾನು ಏನು ಮಾಡ ಬೇಕು ಎಂದು" ಪ್ರಾರ್ಥಿಸಲೂ ಇಲ್ಲ ಅದಕ್ಕೆ ಬದಲಾಗಿ ದೇವರ ಮುಂದೆ ಬೋರಲು ಬಿದ್ದು, "ನಿನ್ನ ಇಷ್ಟವನ್ನೇ ನನ್ನಲ್ಲಿ ನೆರವೇರಿಸು" ನಿನ್ನ ಚಿತ್ತವಾದರೆ ನಾನು ಸಿಂಹಾಸನಕ್ಕೆ ಹಿಂದಿರುಗು ತ್ತೇನೆ. "ಅದು ಒಳ್ಳೆಯದೇ ನಿನ್ನ ಚಿತ್ತವಿಲ್ಲದಿದ್ದರೆ ಅದೂ ಸಹ ಸರಿಯೇ. ಉತ್ತಮವಾದದ್ದು ಏನು ಎಂಬುದು ನಿನಗೆ ತಿಳಿದಿದೆ; ಆದರೆ ಅದು ನನಗೆ ತಿಳಿಯದು. ನಿನಗೆ ಇಷ್ಟ ಬಂದ ಪ್ರಕಾರ ನನ್ನಲ್ಲಿ ಉತ್ತಮವಾದದ್ದನ್ನು ಮಾಡು."

ಯೆರುಸಲೇಮಿಗೆ ಹಿಂದಿರುಗಿರಿ ಎಂದು ಚಾದೋಕನಿಗೂ, ಎಬ್ಯಾತಾರನಿಗೂ ದಾವೀದನು ಹೇಳಲು, ಅವರಿಗೆ ಬೇಸರವಾಯಿತು. ಅವರು ಹಿಂತಿರುಗುವಂಥದ್ದು, ಅವರು ಅವನ ಜೊತೆಯಲ್ಲಿ ಓಡಾಡುವದಕ್ಕಿಂತಲೂ, ಬಹು ಪ್ರಯೋಜನಕರವಾಗಿತ್ತು. ಮತ್ತು ಅವರು ಅವನಿಗೆ ಕಿವಿ ಮತ್ತು ಕಣ್ಣಾಗುವದಕ್ಕೆ ಸಾಧ್ಯವಾಗಿತ್ತು. "ಅಬ್ಷಾಲೋಮನು ಹಿಂದಿರುಗಿದಾಗ," "ಅಲ್ಲಿ ಏನು ನಡೆಯುತ್ತಿದೆ.[4] ಎಂದು ತಿಳುಕೊಳ್ಳಿರಿ ಎಂದು ಅರಸನು ಹೇಳಿದನು. ಆನಂತರ ನಿಮ್ಮ ಮಕ್ಕಳ ಸಂಗಡ ವಾರ್ತೆಯನ್ನು ನನಗೆ ತಿಳಿಸಿರಿ. ನಿಮ್ಮಿಂದ ಸುದ್ದಿ ತಿಳಿಯುವವರೆಗೂ ನಾವು ಯೊರ್ದನ್‌ನಿನ[5] ಈ ಬದಿಯಲ್ಲಿರುವೆವು ಅಂದನು." ನಂತರ ತೃಪ್ತರಾದ ಚಾದೋಕ್ ಮತ್ತು ಎಬ್ಯಾತಾರರು, ಮಂಜೂಷವನ್ನು ತೆಗೆದು ಕೊಂಡು ಪಟ್ಟಣಕ್ಕೆ ಹಿಂದಿರುಗಿದರು.

## ಅವನು ತನ್ನ ಉದ್ವೇಗವನ್ನು ತೋರ್ಪಡಿಸಲು ಭಯಪಡಲಿಲ್ಲ (15:30-37)

ಚಾದೋಕ ಮತ್ತು ಎಬ್ಯಾತಾರರು ಹೊರಟು ಹೋದ ನಂತರ, ದಾವೀದನು ಎಣ್ಣೇ ಮರದ ಗುಡ್ಡದ ಇಳಿಜಾರನ್ನು ಹತ್ತಲು ಪ್ರಾರಂಭಿಸಿದನು. "ಈಗ ದಾವೀದನು ಮೋರೆಯನ್ನು

ಮುಚ್ಚಿಕೊಂಡು ಅಳುತ್ತಾ ಬರಿಗಾಲಿನಿಂದ ಹೋದನು'' - ಅವನ ಜೊತೆಯಲ್ಲಿದ್ದ ಜನರೂ ಮೋರೆಮುಚ್ಚಿಕೊಂಡು ಅಳುತ್ತಾ ಏರಿದರು (15:30).

ನಾವು ಶಿಕ್ಷೆಗೆ ಒಳಪಡುವದು ದುಖದ ಸಂಗತಿಯಾಗಿರುತ್ತದೆ; ಅದನ್ನು ತಳ್ಳಿ ಹಾಕುವ ಪ್ರಮಯವಿಲ್ಲ. ಮತ್ತು ಅದರಲ್ಲೆ ಮುಳುಗಿ ಹೋಗುವ ಸಾಧ್ಯತೆ ಹೆಚ್ಚಾಗಿದ್ದು (ಇದರ ಬಗ್ಗೆ ಮುಂದೆ ಹೆಚ್ಚಾಗಿ ಹೇಳುವವರಾಗಿರುತ್ತೇವೆ); ಕ್ರಮವಾಗಿ ಕಣ್ಣೀರಿನಲ್ಲಿರುತ್ತೇವೆ, ಇದರ ಬಗ್ಗೆ ನಾವು ನಾಚಿಕೆ ಪಡುವ ಅವಶ್ಯವಿಲ್ಲ. ನಮಗೆ ಯಾತನೆಯೇ ಆಗಿಲ್ಲ ಎನ್ನುವ ಅಂಶ, ಸ್ವಸ್ಥತೆಯ ಕಾರ್ಯಕ್ಕೆ ಅಡ್ಡಿಯಾಗುವಂಥದ್ದಾಗಿರುತ್ತದೆ, ಆದರೆ ಅದನ್ನು ಯಥಾರ್ಥವಾಗಿ ಒಪ್ಪಿಕೊಂಡರೆ, ಅದು ನಮಗೆ ಸಹಾಯ ಮಾಡುತ್ತದೆ. ದಾವೀದನು ತನ್ನ ಹೃದಯದಲ್ಲಿದ್ದ ದುಗುಡವನ್ನು ಹೊರಕ್ಕೆ ತೋರ್ಪಡಿಸಲು ಹಿಂಜರಿಯಲಿಲ್ಲ.

ಅಹೀತೋಫೆಲನು, ಸಹ ಅಬ್ಷಾಲೋಮನ ಒಳಸಂಚಿನಲ್ಲಿ ಪಾಲುಗಾರನಾದ ವಿಷಯವನ್ನು ದಾವೀದನು ತಿಳಿದಾಗ, ಅವನ ಹೃದಯದ ಯಾತನೆ ಹೆಚ್ಚಾಯಿತು. ಅಹಿತೋಫೆಲನು ದಾವೀದನ ನಂಬಿಕೆಯ ಸಲಹೆಗಾರರಲ್ಲಿ ಒಬ್ಬನಾಗಿದ್ದನು; ಈಗ ಅವನು ದಾವೀದನನ್ನು ತಿರಸ್ಕರಿಸಿದ್ದನು. ದಾವೀದನು ಈ ವಿಷಯದಲ್ಲಿ ಹೆಚ್ಚು ಸಮಯವನ್ನು ಕಳೆಯದೆ, ತನ್ನ ಹೃದಯವನ್ನು ದೇವರ ಮುಂದೆ ಸುರಿದನು: "ಯೆಹೋವನೇ, ಅಹೀತೋಫೆಲನ ಆಲೋಚನೆಗಳನ್ನು ನಿರರ್ಥಕ ಪಡಿಸು ಎಂದು ಪ್ರಾರ್ಥಿಸಿದನು'' (15:31).

ದಾವೀದನ ಈ ಪ್ರಾರ್ಥನಾ ಮನವಿಯು ಕ್ಷಣದಲ್ಲೇ ನೆರವೇರುವಂತಿತ್ತು. ದಾವೀದನು ಗುಡ್ಡದ,[6] ತುದಿಯನ್ನು ಸೇರಿದಾಗ, ಅರ್ಕೀಯನಾದ[7] ಹೂಷೈ ಅವನನ್ನು ಸಂಧಿಸಿದನು. ಎರಡು ಸಾರಿ ಹೂಷೈ "ದಾವೀದನ ಸ್ನೇಹಿತನು'' ಎಂಬುದಾಗಿ ಕರೆಯಲ್ಪಟ್ಟನು (15:37; 16:16).[8] ದಾವೀದನ ಒಡ್ಡೋಲಗದಲ್ಲಿ ಇವನು ನಂಬಿಗಸ್ತನು ಹಾಗೂ ದಾವೀದನ ಸಲಹೆಗಾರರಲ್ಲಿ ಒಬ್ಬನಾಗಿದ್ದನು. ಚಾದೋಕ್ ಮತ್ತು ಎಬ್ಯಾತಾರರಂತೆ, ಹೂಷೈ ಸಹ ದಾವೀದನೊಂದಿಗೆ ಹೊರಡಲು ಸಿದ್ಧವಾಗಿದ್ದನು. ಆದರೆ ಇನ್ನೊಂದು ಸಾರಿ ದಾವೀದನು ತನ್ನ ತಲೆಯನ್ನು ಅಲ್ಲಾಡಿಸಿ, "ಅವನಿಗೆ - ನೀನು ನನ್ನ ಸಂಗಡ ಬರುವದಾದರೆ ನನಗೆ ಭಾರವಾಗುವಿಯಷ್ಟೆ'' (15:33). ಕಡೆಯದಾಗಿ ದಾವೀದನು ಇನ್ನೊಂದು ಬಾಯಿಯನ್ನು ತುಂಬಿಸುವ ಅವಶ್ಯವಿತ್ತು.

ಅವನ ಮಾತನ್ನು ಹಗುರ ಮಾಡುವದಕ್ಕೆ, ದಾವೀದನು ಯೆಹೋವನೇ ಅಹಿತೋಫೆಲನ ಆಲೋಚನೆಗಳನ್ನು ನಿರರ್ಥಕಪಡಿಸು ಎಂದು ಹೇಳಿದ ಪಾರ್ಥನೆಗೆ, ಹೂಷೈ ಉತ್ತರವಾಗಿದ್ದನು ಎಂದು ತಕ್ಷಣವೇ ತಿಳಿಸಿದನು:

> ಆದರೆ ನೀನು ಹಿಂದಿರುಗಿ ಪಟ್ಟಣಕ್ಕೆ ಹೋಗಿ ಅಬ್ಷಾಲೋಮನಿಗೆ - ಅರಸನೇ, ನಾನು ನಿನ್ನ ಸೇವಕನು; ಮುಂಚೆ ನಿನ್ನ ತಂದೆಯನ್ನು ಸೇವಿಸಿದಂತೆ ಈಗ ನಿನ್ನನ್ನು ಸೇವಿಸುತ್ತೇನೆ ಎಂದು ಹೇಳುವದಾದರೆ ನನಗೋಸ್ಕರ *ಅಹೀತೋಫೆಲನ ಆಲೋಚನೆಯನ್ನು ವ್ಯರ್ಥಮಾಡುವದಕ್ಕೆ ನಿನಗೆ ಅನುಕೂಲವಾಗುವದು* (15:34; ಒತ್ತಿ ಹೇಳಿದ್ದು ನನ್ನದು).[9]

ಹೂಷೈಗೆ ಗೊತ್ತಾಗುವ ವರ್ತಮಾನವನ್ನು, ಚಾದೋಕ್ ಮತ್ತು ಎಬ್ಯಾತಾರರಿಗೆ ತಿಳಿಸಿದರೆ, ಅವರು ನನಗೆ ತಿಳಿಸುವರು ಎಂದು ದಾವೀದನು ಹೇಳಿದನು.

## ಅವನಿಗೆ ಸಹಾಯ ಮಾಡುವಂಥ ಸ್ನೇಹಿತರಿದ್ದರು (15:21, 24, 32-34; 17:27-29)

ಈ ದೃಷ್ಟಾಂತವನ್ನು ಮುಂದುವರಿಸುವದಕ್ಕಿಂತ ಮೊದಲು, ಚಿಕ್ಕ ವಿರಾಮವನ್ನು ತೆಗೆದುಕೊಂಡು, ಒಂದು ಘಟನೆಯನ್ನು ಒತ್ತಿ ಹೇಳುತ್ತೇನೆ. ಈಗಾಗಲೇ ದಾವೀದನ ಸಹಾಯಕ್ಕೆ

ದಾವಿಸಿದ ಅನೇಕ ಸ್ನೇಹಿತರ ಬಗ್ಗೆ ತಿಳಿದಿದ್ದೇವೆ. ನಾವು ಈ ಪಾಠವನ್ನು ಮುಂದುವರಿಸುವಾಗ, ಇತರರ ಬಗ್ಗೆಯೂ ನೋಡಲಿದ್ದೇವೆ. ನಾವು ದೇವರಿಂದ ಶಿಕ್ಷೆಗೆ ಒಳಪಡುವಂಥ ವಿಷಯವು ನಮ್ಮನ್ನು ಬಲಪಡಿಸಿ, ಸಂತೈಸುವಂಥ ಸ್ನೇಹಿತರನ್ನು ಪಡೆದುಕೊಳ್ಳವಂತೆ ಸಹಾಯ ಮಾಡುತ್ತದೆ (ಪ್ರಸಂಗಿ 4:9, 10, 12).

ದಾವೀದನಿಗೆ ಸಹಾಯ ಮಾಡಿದ ಅನೇಕ ಸ್ನೇಹಿತರ ಬಗ್ಗೆ ಹೆಚ್ಚು ತಿಳಿದಿರುವದಿಲ್ಲ. ಅಬ್ಷಾಲೋಮನು ಯೆರುಸಲೇಮಿಗೆ ದಾವಿಸುವಂಥ ಸಮಯದಲ್ಲಿ ಅವರು ದಾವೀದನಿಗೆ ಸ್ನೇಹಿತರಾಗಲಿಲ್ಲ, ಎಂಬ ವಿಷಯ ನಮಗೆ ತಿಳಿದದೆ. ಈ ಸಮಯಕ್ಕಿಂತ ಮೊದಲೇ ದಾವೀದನು ತನ್ನ ಸ್ನೇಹದ ಹಸ್ತವನ್ನು ಅವರಿಗೆ ಚಾಚಿದ್ದನು - ಅವನು ನೀರಿನ ಮೇಲೆ ಚೆಲ್ಲಿದ, ಕರುಣೆಯ ರೊಟ್ಟಿಯು, ಅವನ ಬಳಿಗೆ ಹಿಂದಿರುಗಿತ್ತು (ಪ್ರಸಂಗಿ 11:1).

ದೇವರು ನೀಡುವ ಶಿಕ್ಷೆಯನ್ನು ಅನುಭವಿಸಲು, ಸಿದ್ಧರಾಗುವದು ಶಿಕ್ಷೆಯನ್ನು ಹೊಂದಿದ, ಸಮಯದಿಂದಲ್ಲ, ಅದು ಬಹಳ - ಬಹಳ ದಿವಸಗಳ ಹಿಂದಿನಿಂದಲೇ ಪ್ರಾರಂಭವಾಗಬೇಕು, ಹವಮಾನದ ವರದಿಗಾರನು, "ಒಂದು ಚಂಡ ಮಾರುತವು ಜಂಡ್‌ಸೋನಿಯದಿಂದ ಒಂದು ಕಿಲೋಮೀಟರ್ ಅಂತರದಲ್ಲಿದ್ದು, ಅದು ಈಗ ಪಟ್ಟಣಕ್ಕೆ ಸಮೀಪಿಸುತ್ತಿದೆ" ಎಂದು ಹೇಳುವಂತ ಸಮಯ ಚಂಡ ಮಾರುತದಿಂದ ರಕ್ಷಿಸಿಕೊಳ್ಳುವ ಹಂದರಗಳನ್ನು ತೋಡಿಕೊಳ್ಳುವ ಸಮಯವಲ್ಲ.[10] ಜೀವನದ ಚಂಡಮಾರುತವು ನಮ್ಮ ತಲೆಯ ಮೇಲೆ ಬಡಿಯುವಂಥ ಸಮಯ, ಸ್ನೇಹಿತರ ಆಸರೆಯನ್ನು ಪಡೆದುಕೊಳ್ಳುವಂತ ಸಮಯವಲ್ಲ.

ದೇವರು ನಮ್ಮ ಭವಿಷ್ಯದಲ್ಲಿ ನೀಡುವ ಶಿಕ್ಷೆಯನ್ನು ಸ್ವೀಕರಿಸಲು, ಈಗಲಿಂದಲೇ ಸಿದ್ಧರಾಗಬೇಕು. ಮತ್ತು ಈಗಲಿಂದಲೇ ದೇವರೊಂದಿಗಿನ ಮತ್ತು ಇತರರೊಂದಿಗಿನ ಸಂಬಂಧದಲ್ಲಿ ಸಿದ್ಧರಾಗಬೇಕು. "ಸ್ನೇಹಿತರ ಸ್ನೇಹವನ್ನು ಬಯಸುವವನು ತಾನೇ ಸ್ನೇಹಿಯಾಗಿರಬೇಕು" (ಜ್ಞಾನೋಕ್ತಿ 18:24; KJV).

## ಅವನು ಪರೀಕ್ಷಿಸಲ್ಪಟ್ಟನು (16:1-14)

ಹೂಷೈ, ದಾವೀದನನ್ನು ಬಿಟ್ಟು ಹೋದ ನಂತರ, ಅರಸನು, ಎಣ್ಣೇ ಮರದ ಗುಡ್ಡದ ಪೂರ್ವ ಭಾಗದ ಇಳಿಜಾರಿನಲ್ಲಿ ಇಳಿದನು. ಆತನು ಇಳಿಯುವಾಗ: ಮತ್ತೊಬ್ಬ ಸ್ನೇಹಿತನಾದ ಚೀಬನು ಅವನನ್ನು ಸಂಧಿಸಿದನು. ಮೆಫೀಬೋಶೆತನ ಸರ್ವಾಸ್ತಿಯ ಉಸ್ತುವಾರಿಯನ್ನು, ದಾವೀದನು ಇವನಿಗೆ ವಹಿಸಿದ್ದನು. ಚೀಬನು ತಡಿಹಾಕಿದ ಎರಡು ಕತ್ತೆಗಳ ಮೇಲೆ ಇನ್ನೂರು ರೊಟ್ಟಿಗಳನ್ನು ಒಣಗಿದ ದ್ರಾಕ್ಷಿಯನ್ನು ಹಣ್ಣುಗಳನ್ನು, ಒಂದು ಬಲದಲ್ಲಿ ದ್ರಾಕ್ಷಾರಸವನ್ನು, ಹೇರಿಕೊಂಡು ಬಂದು ದಾವೀದನನ್ನು ಎದುರುಗೊಂಡನು. ದಾವೀದನು ಹೊರಟಿದ್ದಾನೆ, ಎಂಬ ವರ್ತಮಾನವನ್ನು ಕೇಳಿದ ದಿನದಿಂದಲೇ ಚೀಬನು ಕಾರ್ಯಮಾಡಲು ತೊಡಗಿದನು ಆದದ್ದರಿಂದ ಅವನು ಅರಸನಿಂದ ಆಹ್ವಾನಿಸಲ್ಪಟ್ಟನು.

ಆಗ ದಾವೀದನು ಚೀಬನಿಗೆ ಮೆಫೀಬೋಷೆತನು ಎಲ್ಲಿರುವನು ಎಂದು ವಿಚಾರಿಸಿದನು.[11] "ಅವನು ತನ್ನ ತಂದೆಯ ರಾಜ್ಯವನ್ನು ಇಸ್ರಾಯೇಲ್ಯರು ಈ ಹೊತ್ತು ತನಗೆ ತಿರಿಗಿ ಕೊಡುವರೆಂದು ಹೇಳಿ ಅವನು ಯೆರುಸಲೇಮಿನಲ್ಲೇ ಉಳಿದುಕೊಂಡನು" (16:3). ಚೀಬನು ಕುಟಿಲ ನಗುವಿನಿಂದ ಹೇಳುವದನ್ನು ನಾನು ನೋಡುತ್ತೇನೆ. ಅವನ ಕುಟಿಲ ನಗುವನ್ನು ನಾನು ನೋಡುವಾಗ, ಅವನು ಏನನ್ನಾದರೂ ಪಡೆಯಲು, ಸ್ವಾರ್ಥಿಯಾದ ಅವಕಾಶವಾದಿಯಾಗಿದ್ದನು. ಬಹುಸುಂದರನೂ, ಬಲವುಳ್ಳವನೂ, ಜನರ ಹೃದಯಗಳನ್ನು ಗೆದ್ದವನೂ, ಸೈನ್ಯದಿಂದ ಪ್ರೋತ್ಸಾಹ ಪಡೆದವನೂ ಆದ ಅಬ್ಷಾಲೋಮನಿಂದ ಹೇಗೆ, ಒಬ್ಬ ಕುಂಟನಾದವನು ರಾಜ್ಯವನ್ನು ಹಿಂದಕ್ಕೆ ಪಡೆಯಲು ಸಾಧ್ಯ? ಈ ಎರಡು ಮಾತುಗಳಲ್ಲಿ ಒಂದು ಮಾತು ಮಾತ್ರ ಸತ್ಯವಾಗಿದೆ: ಮೆಫೀಬೋಶೆತನು ಮೂರ್ಖನೂ, ಕೃತಜ್ಞತೆಯಿಲ್ಲದವನೂ ಆಗಿರಬಹುದು. ಅಥವಾ ಚೀಬನು, ಮುಖಸ್ತುತಿಮಾಡುವ ಸುಳ್ಳುಗಾರನು, ಆಗಿರಬಹುದು. ನನ್ನ ಊಹೆ ಎರಡನೆಯದೇ

ಎಂಬುದಾಗಿ ಹೇಳುತ್ತದೆ.

ಚೀಬನ ಉದಾರವಾದ ಹೃದಯದ ಬಗ್ಗೆ ದಾವೀದನು ಬಹು ಸಂತೋಷಪಟ್ಟು, ಮೆಫೀಬೋಶೆತನ ಆಸ್ತಿಯೆಲ್ಲಾ ನಿನ್ನದೇ ಅಂದನು.

ಈ ಪರಿಸ್ಥಿತಿಯಲ್ಲಿ ಉಂಟಾದ ಈ ದೃಷ್ಯವು ನಮಗೆ ಶಿಕ್ಷೆಯ ಸಮಯದಲ್ಲಿ ಉಂಟಾಗುವ ಸಂಬಂಧಗಳ ಕುರಿತಾಗಿ ಅನೇಕ ಸತ್ಯಾಂಶಗಳನ್ನು ತಿಳಿಸುತ್ತದೆ: ನಾವು ನೊಂದು ಕೊಂಡಿರುವಾಗ, ನಾವು ಇತರರಿಗೆ ಅವಕಾಶ ಮಾಡಿಕೊಡುವವರಾಗಿದ್ದೇವೆ. ನಮ್ಮ ಈ ಪರಿಸ್ಥಿತಿಯನ್ನೇ ಕೆಲವರು ತಮಗೆ ಅವಕಾಶ, ಮಾಡಿಕೊಳ್ಳುವವರಾಗಿರುತ್ತಾರೆ. ಚೀಬನು ದಾವೀದನ ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡಂತೆ ರಸ್ತೆಯ ಅಪಘಾತದಲ್ಲಿ ಸತ್ತಿರುವ ಪ್ರಾಣಿಯು ಹೇಗೆ ಹಕ್ಕಿಯನ್ನು ಆಕರ್ಷಿಸುವಂತೆ ಕೆಲವು ವಿಧವಾದ ವ್ಯಕ್ತಿಗಳು, ನೊಂದವರನ್ನು ಆಕರ್ಷಿಸುತ್ತಾರೆ. ಅವರು ತಮ್ಮ ಸ್ವಾರ್ಥಕ್ಕಾಗಿ, ನೊಂದವರ ಮೇಲೆ ಕರುಣೆ, ಅನುಕಂಪವನ್ನು ತೋರ್ಪಡಿಸುವವರಾಗಿರುತ್ತಾರೆ.[12] ನಾವು ಅವರ ಕುತಂತ್ರಕ್ಕೆ ಒಳಗಾಗ ಬೇಕು ಎಂಬುದಾಗಿ ಅಲ್ಲ. ನಾವು ಅವರ ಕುಯುಕ್ತಿಗೆ ಒಳಗಾಗದಂತೆ ಎಚ್ಚರವಾಗಿರಬೇಕು.

ಚರ್ಚಿಸದೆ ಇರುವ ಶಿಕ್ಷೆಯ ಉದ್ದೇಶವನ್ನು ನಾವು ಇನ್ನೂ ಪರಿಚಯಿಸಿ ಕೊಂಡಿರುವದಿಲ್ಲ. ಕರ್ತನು ನಮ್ಮನ್ನು *ಪರೀಕ್ಷಿಸುವ* ಕುರಿತಾದ ಒಂದು ತಿಳುವಳಿಕೆಯ ಜ್ಞಾನ ನಮ್ಮಲ್ಲಿರುತ್ತದೆ - ನಾವು ಆ ಪರೀಕ್ಷೆಯನ್ನು ಸಂಧಿಸುವಾಗ, ಅದು ನಮ್ಮನ್ನು ಉತ್ತಮಪಡಿಸುತ್ತದೆ (ಇಬ್ರಿಯ 12:10; ಯಾಕೋಬ 1:2-4). ನಾತಾನನ ಪ್ರವಾದನೆಯು ಸತ್ಯವಾದಾಗ, ದಾವೀದನು ವಿವಿಧ ಹಂತದಲ್ಲಿ ಪರೀಕ್ಷಿಸಲ್ಪಟ್ಟನು. ಅವನ ವಿಶ್ವಾಸ ಪರೀಕ್ಷಿಸಲ್ಪಟ್ಟಿತು. ಅವನು ಅಬ್ಷಾಲೋಮ ನನಿಂದ ಓಡಿ ಹೋದಾಗ, ಈ ಪರೀಕ್ಷೆಗಳು ಮುಂದುವರಿದವು. ಬಹಳ ಕಠಿಣವಾದ ಪರೀ ಕ್ಷೆಯು ಮುಂದೆ ಬರುವದಿತ್ತು.

ದಾವೀದನು ಎಣ್ಣೇ ಮರದ ಗುಡ್ಡದ, ಪೂರ್ವದ ಇಳಿಜಾರಿನಲ್ಲಿ ಇಳಿದು ಬಹುರೀಮ್ ಎಂಬ ಹಳ್ಳಿಗೆ ಬಂದನು. ಅಲ್ಲಿ ಸೌಲನ ವಂಶದವನೂ, ಗೇರನ ಮಗನೂ ಆದ ಶಿಮ್ಮಿ ಎಂಬವನು ಕಲ್ಲುಗಳನ್ನು ಎಸೆಯುತ್ತಾ ಮತ್ತು ದಾವೀದನನ್ನು ಶಪಿಸುತ್ತಾ ಆ ಊರಿನಿಂದ ಹೊರಗೆ ಬಂದನು:

> ನಡೆ, ಕೊಲೆಗಾರನೇ, ನೀಚನೇ, ನಡೆ; ಸೌಲನ[13] ರಾಜ್ಯವನ್ನು ಕಸಕೊಂಡು ಅವನ ಮನೆಯವರನ್ನು ಕೊಂದದ್ದಕ್ಕಾಗಿ ಯೆಹೋವನು ನಿನಗೆ ಮುಯ್ಯಿ ತೀರಿಸಿದ್ದಾನೆ; ಆತನು ರಾಜ್ಯವನ್ನು ನಿನ್ನ ಮಗನಾದ ಅಬ್ಷಾಲೋಮನಿಗೆ ಕೊಟ್ಟುಬಿಟ್ಟನು. ಕೊಲೆಗಾರನೇ, ಇಗೋ, ನಿನಗೆ ಈಗ ತಕ್ಕ ಆಪ್ಪತ್ತು ಬಂದಿದೆ ಅಂದನು (16:7, 8).

ಚೀಬನಂತೆ ಕೆಲವು ವಿಧವಾದ ಜನರು, ನೀವು ನೊಂದುಕೊಂಡಿರುವಾಗ, ತಮ್ಮ ಸ್ವಾರ್ಥಕ್ಕಾಗಿ ನಿಮ್ಮ ಈ ಸಂದರ್ಭವನ್ನು ಉಪಯೋಗಿಸುಕೊಳ್ಳುವರು ಎಂದು ನಾನು ನಿಮಗೆ ನೆನಪು ಮಾಡಿದ್ದೇನೆ. ಇನ್ನೂ ಕೆಲವರು ನಿಮ್ಮ ನೊಂದ ಸಂಧರ್ಭವನ್ನು, ಬೇರೆ ವಿಧವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವರು. ಈ ರೀತಿಯಾದ ವಿಷಯ ನಿಮ್ಮನ್ನು ಓದೆಯುವಂಥದ್ದಾಗಿರುತ್ತದೆ - ಶಿಮ್ಮಿಯು ದಾವೀದನಿಗೆ ಮಾಡಿದಂತೆ. ನೀವು ನೊಂದು ಕೊಂಡಿರುವಾಗ ಜನರು ಈ ರೀತಿ ಮಾಡುವದು ನಿಮ್ಮನ್ನು ಗುಣಪಡಿಸುವ ಬದಲು, ನಿಮ್ಮ ನೋವನ್ನು ಹೆಚ್ಚು ಮಾಡುತ್ತದೆ! ಮುಖ್ಯವಾಗಿ ಶಿಮ್ಮಿಯಂತೆ ಅನ್ಯಾಯವಾಗಿ ನಿಂದೆಗೆ ಒಳಗಾದಾಗ ಅದು ಇನ್ನೂ ನೋವನ್ನು ಉಂಟು ಮಾಡುತ್ತದೆ.

ದಾವೀದನೊಂದಿಗಿದ್ದ ಅಬಿಷೈ ಈ ರೀತಿಯಾಗಿ, ಅರಸನಿಗೆ ಮನವಿಮಾಡಿದನು. "ನಾನು ಅವನಿರುವಲ್ಲಿಗೆ ಹೋಗಿ ಅವನ ತಲೆಯನ್ನು ಹಾರಿಸಿಕೊಂಡು ಬರುವೆನು" (16:9)! ನಾನು ಬಹುಶ ಈ ರೀತಿ ಹೇಳುತ್ತಿದ್ದೆ, "ಅದು ಒಳ್ಳೆಯ ಯೋಜನೆಯೇ! ಅವನು ಬೀಸಿದ ಕಲ್ಲಿನಿಂದ ನನ್ನ ತಲೆಯಲ್ಲಿ ಗಾಯವಾಗಿದೆ. ಅವನ ಸ್ವರದಿಂದ ನನ್ನ ಕಿವಿ ಗಡಚುತ್ತಿದೆ. ಅವನ

ತಲೆಯನ್ನು ಹಾರಿಸಿಬಿಡು!" ಜನರು ನಿಮ್ಮ ಗಾಯವನ್ನು ನೋವನ್ನು ಹೆಚ್ಚು ಮಾಡುವಾಗ, ಅವರಿಗೆ ಮುಯ್ಯಿ ತೀರಿಸಬೇಕೆಂಬ ಶೋಧನೆಗೆ ಒಳಗಾಗುತ್ತೇವೆ, ಆದರೆ ದಾವೀದನು, ತನ್ನ ತಲೆಯನ್ನು ಅಲ್ಲಾಡಿಸುತ್ತಾ ಹೇಳಿದ್ದೇನೆಂದರೆ,[14]

> … ಚೆರೂಯಳ ಮಕ್ಕಳೇ, ನನಗೆ ನಿಮ್ಮ ಗೊಡವೆಯೇ ಬೇಡ; ಬಿಡಿರಿ, ಅವನು ಶಪಿಸಲಿ; ದಾವೀದನನ್ನು ಶಪಿಸೆಂದು ಯೆಹೋವನೇ ಅವನಿಗೆ ಆಜ್ಞಾಪಿಸಿದ ಮೇಲೆ ನೀನು ಹೀಗೇಕೆ ಮಾಡಿದಿ ಎಂದು ಅವನನ್ನು ಯಾರು ಕೇಳಬಹುದು ಎಂದು ಉತ್ತರಕೊಟ್ಟನು. ಇದಲ್ಲದೆ ಅವನು ಅಬೀಷೈಗೂ ತನ್ನ ಎಲ್ಲಾ ಸೇವಕರಿಗೂ - ನೋಡಿರಿ, ನನ್ನಿಂದ ಹುಟ್ಟಿದ ನನ್ನ ಮಗನೇ ನನ್ನ ಪ್ರಾಣವನ್ನು ತೆಗೆಯಬೇಕೆಂದಿರುವನಲ್ಲಿ ಈ ಬೆನ್ಯಾಮೀನ್ಯನು ಹೀಗೆ ಮಾಡುವದು ಯಾವ ದೊಡ್ಡ ಮಾತು! ಬಿಡಿರಿ, ಅವನು ಶಪಿಸಲಿ; ಹೀಗೆ ಮಾಡಬೇಕೆಂದು ಯೆಹೋವನೇ ಅವನಿಗೆ ಆಜ್ಞಾಪಿಸಿದ್ದಾನೆ. ಒಂದು ವೇಳೆ ಯೆಹೋವನು ನನ್ನ ಕಷ್ಟವನ್ನು ನೋಡಿ ಈ ಹೊತ್ತಿನ ಶಾಪಕ್ಕೆ ಬದಲಾಗಿ ನನಗೆ ಶುಭವನ್ನು ಅನುಗ್ರಹಿಸಾನು ಎಂದು ಹೇಳಿದನು (16:10-12).

ದಾವೀದನು ದೇವರ ಶಿಕ್ಷೆಯನ್ನು ಕೃಪೆಯಿಂದ ಸ್ವೀಕರಿಸಿದ್ದನ್ನು ಪುನ ನೋಡುತ್ತಿದ್ದೇವೆ. ಶಿಮ್ಮಿಯ ಕ್ರಿಯೆಯ ಹಿಂದೆ, ಯೆಹೋವನ ಹಸ್ತವಿತ್ತು ಎಂದು ದಾವೀದನು ಗ್ರಹಿಸಿಕೊಂಡನು. ದೇವರ ಎಲ್ಲಾ ಯೋಜನೆಗಳನ್ನು, ಉದ್ದೇಶಗಳನ್ನೂ ತಿಳುಕೊಳ್ಳುವದರಲ್ಲಿ, ದಾವೀದನು ನಟನೆ ಮಾಡಲಿಲ್ಲ. ಅವನು ಸರಳವಾಗಿ ಹೇಳಿದ್ದು "*ಒಂದು ವೇಳೆ* ಯೆಹೋವನು ಅವನಿಗೆ ಹೇಳಿರ ಬಹುದು" ಮತ್ತು "*ಬಹುಶ* ಯೆಹೋವನು ನನ್ನ ಕಷ್ಟವನ್ನು ನೋಡಬಹುದು." (ಒತ್ತಿ ಹೇಳಿದ್ದು ನನ್ನದು.) ದಾವೀದನು ಕೃಪಾಪೂರ್ಣವಾಗಿ ಶಿಮ್ಮಿಯ ನಿಂದನೆಯನ್ನು ಸ್ವೀಕರಿಸಿದನು. ಆ ರೀತಿಯಾದ ನಿಂದೆಯು, ಪಾಪದ ಪರಿಣಾಮದ ಫಲವಾಗಿರಬಹುದು ಎಂದು ದಾವೀದನು ತಿಳಿದನು.

ದೇವರು ನಮ್ಮನ್ನು ಶಿಕ್ಷಿಸುವಾಗ, ನಮ್ಮ ದೌರ್ಬಲ್ಯಗಳನ್ನು ಅರಿತುಕೊಳ್ಳುವ, ಮುಯ್ಯಿ ತೀರಿಸುವ ಶೋಧನೆಗೆ ಒಳಗಾಗಬಾರದು. ನಮ್ಮ ಸಮಸ್ಯೆಯ ಉದ್ದೇಶ ನಮ್ಮನ್ನು ಪರೀಕ್ಷಿಸುವದೇ ಎಂದು ನೆನಪು ಮಾಡಿಕೊಳ್ಳೋಣ; ದೇವರ ಸಹಾಯದಿಂದ ನಾವು ಪರಿಶೋಧನೆಯಿಂದ ಬದುಕುಳಿಯುತ್ತೇವೆ; ನಾವು ಪರಿಶೋಧನೆಗಳಲ್ಲಿ ಯಶಸ್ಸನ್ನು ಗಳಿಸಿದರೆ, ನಾವು ಉತ್ತಮವಾದ ಜನರಾಗುವದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ದೇವರೆ ನಮ್ಮಲ್ಲಿ ಕಾರ್ಯಮಾಡುವಂತೆ ನಾವು ಸಮಾಧಾನದಲ್ಲಿರೋಣ, ದೇವರು ದಾವೀದನ ಜೀವಿತದಲ್ಲಿ ಕಾರ್ಯನಿರ್ವಹಿಸಿದಂತೆ.

## ದೇವರು ಅವನಿಗೆ ಸಹಾಯಿಸಿದರು (16:15-17:23)

16:15ರಲ್ಲಿ ನೋಟವು ಯೆರುಸಲೇಮಿನ ಕಡೆಗೆ ಬದಲಾಗಿದೆ. ಅಬ್ಷಾಲೋಮನು ಯೆರುಸಲೇಮಿಗೆ ಪ್ರವೇಶಿದಾಗ, ಅಲ್ಲಿ ಸಂಭ್ರಮೋತ್ಸವವು ಉಂಟಾಯಿತು. ಸೈನಿಕರು ಹಾಗೂ ಜನರ ಗುಂಪು ಅವನನ್ನು ಹೆಬ್ರೋನಿನಿಂದ ಹಿಂಬಾಲಿಸಿದರು.[15]

ಅಬ್ಷಾಲೋಮನು ಹತ್ತಿರ ಬಂದಾಗ, ಅರ್ಕೀಯನಾದ ಹೂಷೈಯು "ಅರಸನು ಚಿರಂಜೀವಿಯಾಗಿರಲಿ, ಅರಸನು ಚಿರಂಜೀವಿಯಾಗಿರಲಿ, ಎಂದು ಕೂಗಿದನು!" (16:16). ಯೆರೂಸಲೇಮಿಗೆ ಹಿಂದಿರುಗು ಎಂಬುದಾಗಿ ದಾವೀದನು ಹೇಳಿದ ಸ್ನೇಹಿತರಲ್ಲಿ, ಹೂಷೈ ಸಹ ಒಬ್ಬನಾಗಿದ್ದನು, ಹೂಷೈಯ ಮಾತುಗಳು ಅಸ್ಪಷ್ಟವಾಗಿದ್ದವು (ಬಹುಶ ದಾವೀದನೇ ಅರಸನಾಗಿದ್ದನು ಎಂದು ತಿಳಿಸುತ್ತಿತ್ತು). ಅಬ್ಷಾಲೋಮನು ಮುಖಸ್ತುತಿ ಮಾಡಲ್ಪಟ್ಟರೂ, ಸಂದೇಹವುಳ್ಳವನಾದನು. ಹೂಷೈ ಅವನ ಸಂದೇಹವನ್ನು ಇನ್ನೂ ಇತರೆ ಮಾತುಗಳಿಂದ ಶಾಂತಗೊಳಿಸಿದನು: "ಹಾಗಲ್ಲ - ಯೆಹೋವನಿಗೂ ಆ ಜನರೂ ಎಲ್ಲಾ ಇಸ್ರಾಯೇಲ್ಯರೂ

ಯಾವನನ್ನು ಆರಿಸಿದ್ದಾರೋ ಅವನ ಪಕ್ಷದವನಾಗಿರುವೆನು; ಅವನ ಬಳಿಯಲ್ಲಿ ವಾಸಿಸುವೆನು" (16:18). ಈ ಮಾತುಗಳು ಅಬ್ಷಾಲೋಮನಿಗೆ ಅನ್ವಯಿಸುವದಿಲ್ಲ, ಯಾಕೆಂದರೆ ಯೆಹೋವನು ಅವನನ್ನು ಆರಿಸಿರಲಿಲ್ಲ; ಆದರೆ ಅವು ದಾವೀದನಿಗೆ ಮಾತ್ರ ಅನ್ವಯಿಸುತ್ತಿತ್ತು. ಸಹಜವಾಗಿ ಈ ಮಾತುಗಳು ಅಬ್ಷಾಲೋಮನನ್ನು ತೃಪ್ತಿಗೊಳಿಸಿದವು, ಯೌವನಸ್ಥನಾದ ಈ ದಂಗೆ ಕೋರನು ಅರಮನೆಯಲ್ಲಿ ಮುಂದುವರಿದನು.

ಮುಂದೆ ಏನು ಮಾಡಬೇಕು ಎಂದು ಅಬ್ಷಾಲೋಮನಿಗೆ ತಿಳಿದಿರಲಿಲ್ಲ. ದಾವೀದನಿಗೆ ಆಲೋಚನೆ ನೀಡುತ್ತಿದ ಸಲಹೆಗಾರನು, ಮೊದಲನೆಯದಾಗಿ ಅವನ ತಂದೆಯ ಉಪಪತ್ನಿಗಳ ಬಳಿಗೆ ಹೋಗಲು ಸಲಹೆ ನೀಡಿದನು. ಈ ಕಾರ್ಯವು ಅಬ್ಷಾಲೋಮನು ತಂದೆಗೆ ಭಯಪಡುವವನಲ್ಲ ಮತ್ತು ಅವರಿಬ್ಬರ ಮಧ್ಯದಲ್ಲಿರುವ ಎಲ್ಲಾ ಹೊಂದಾಣಿಕೆಗಳು ಮುರಿದು ಬಿದ್ದಿದ್ದವು ಎಂದು ಸೂಚಿಸುತ್ತಿತ್ತು.[16] ಮುಂದೆ ಸಮಯವನ್ನು ವ್ಯರ್ಥಮಾಡದೆ ದಾವೀದನನ್ನು ಹಿಂದಟ್ಟುವ ಸಲಹೆಯನ್ನು ಅಹಿತೋಫೆಲನು ನೀಡಿದನು. ದಾವೀದನು - ನಡೆದು ದಣಿದಿರುವಾಗಲೇ ಅವನನ್ನು ಕೆಡವಿಹಾಕಲು ಸಲಹೆ ನೀಡಿದನು:

> ತರುವಾಯ ಅಹೀತೋಫೆಲನು ಅಬ್ಷಾಲೋಮನಿಗೆ - ಅಪ್ಪಣೆಯಾಗಲಿ, ನಾನು ಹನ್ನೆರಡು ಸಾವಿರ ಜನರನ್ನು ಆರಿಸಿಕೊಂಡು ಈ ರಾತ್ರಿಯೇ ದಾವೀದನನ್ನು ಹಿಂದಟ್ಟುವೆನು; ಅವನು ದಣಿದವನೂ ಧೈರ್ಯಗುಂದಿದವನೂ ಆಗಿರುವಾಗಲೇ ಫಕ್ಕನೆ ಅವನ ಮೇಲೆ ಬಿದ್ದು ಅವನನ್ನು ಬೆದರಿಸುವೆನು, ಅವನ ಜನರೆಲ್ಲರೂ ಓಡಿ ಹೋಗುವರು ಅರಸನೊಬ್ಬನನ್ನೇ[17] ಕೊಂದು ಎಲ್ಲಾ ಜನರನ್ನು ತಿರಿಗಿ ನಿನ್ನ ಬಳಿಗೆ ಬರಮಾಡುವೆನು ... ನಿನ್ನ ಅಪೇಕ್ಷೆಯಂತೆ ಎಲ್ಲಾ ಜನರೂ ಹಿಂದಿರುಗಿ ಬಂದ ಮೇಲೆ ದೇಶದಲ್ಲೆಲ್ಲಾ ಸಮಾಧಾನವುಂಟಾಗುವದು ಎಂದು ಹೇಳಿದನು (17:1-3).

ಅವನ ತಂದೆಯ ಉಪಪತ್ನಿಗಳನ್ನು ಸಂಗಮಿಸು ಎಂದು, ಹೇಳಿದ ಅಹೀತೋಫೆಲನ ಸಲಹೆಯು ಪೈಶಾಚಿಕವಾಗಿತ್ತು.[18] ಆದರೆ ಅವನ ಸಲಹೆಯು ಅತ್ಯುತ್ತಮವಾಗಿತ್ತು.[19] ಒಂದು ವೇಳೆ ಅಬ್ಷಾಲೋಮನು ಈ ಸಲಹೆಯನ್ನು ಹಿಂಬಾಲಿಸಿದ್ದರೆ, ಅವನಿಗೆ ಜಯವು ಬೇಗನೆ ಲಭಿಸುತ್ತಿತ್ತು. ಆದರೆ ದೇವರ ಸಹಾಯವಾಗಿ, ಅಹೀತೋಫೆಲನ ಆಲೋಚನೆಗಳನ್ನು ನಿರರ್ಥಕ ಮಾಡುವ ಉದ್ದೇಶದಿಂದ ಯೆರುಸಲೇಮಿನಲ್ಲಿದ್ದನು. ಅಬ್ಷಾಲೋಮನಿಗೆ ಎರಡನೆಯ ಸಲಹೆ ಬೇಕಾದ್ದದರಿಂದ, ಹೂಷೈಯನ್ನು ಕರೆ ಹೇಳಿದನು.

ಯಾವಾಗ ಅಬ್ಷಾಲೋಮನು ಅಹೀತೋಫೆಲನ ಸಲಹೆಯನ್ನು ನಿರಾಕರಿಸಿದನೋ, ಆಗ ಹೂಷೈ, ಅಹೀತೋಫೆಲನ ಆಲೋಚನೆಗಳು ನೆರವೇರುವದಿಲ್ಲ ಎಂಬುದಕ್ಕೆ ಮೂರು ಕಾರಣಗಳನ್ನು ನೀಡಿದನು: (1) ನಿನ್ನ ತಂದೆಯೂ ಅವನ ಜನರೂ ಶೂರರಾಗಿದ್ದಾರೆಂದು "ಈಗ ಅವರು ಮರಿಯನ್ನು ಕಳಕೊಂಡ ಕರಡಿಯಂತೆ ರೋಷವುಳ್ಳವರಾಗಿದ್ದಾರೆಂದು ನಿನಗೆ ಗೊತ್ತುಂಟಲ್ಲಾ ಅಂದನು" (17:8). (2) ಇದು ದಾವೀದನ ದೂರದೃಷ್ಟಿಯನ್ನು ಕಡಿಮೆ ಅಂದಾಜು ಮಾಡುವಂತೆ ಮಾಡಿತು. ದಾವೀದನು ಶಿಬಿರದಲ್ಲಿ ವಾಸವಾಗಿಲ್ಲ. ಅವನು ಈಗ ಒಂದು ಗುಹೆಯಲ್ಲಾಗಲಿ ಬೇರೆಯಾವದಾದರೊಂದು ಸ್ಥಳದಲ್ಲಿ ಅಡಗಿಕೊಂಡಿರುವನು (17:9). ವೈರಿಯು ಅವರ ಮೇಲೆ ಬೀಳುವಾಗ, ದಾವೀದನು ಮಾತ್ರ ತಪ್ಪಿಸಿಕೊಳ್ಳುವನು. (3) ಮತ್ತು ದಾವೀದನ ಯುದ್ಧ ನೈಪುಣ್ಯವನ್ನು ಹಗುರ ಮಾಡುವ ಹಾಗೆ ಇಲ್ಲ, "ನಿನ್ನ ತಂದೆಯು ರಣವೀರನೆಂದೂ ಅವನ ಸಂಗಡ ಇದ್ದವರು ಪರಾಕ್ರಮಶಾಲಿಗಳೆಂದೂ ಎಲ್ಲಾ ಇಸ್ರಾಯೇಲ್ಯರು ಬಲ್ಲರಷ್ಟೆ. ಮತ್ತು ಅವನು ನಮ್ಮನ್ನು ಸೋಲಿಸುವನು - ಮತ್ತು ನಮ್ಮ ಉದ್ದೇಶವು ನಿರರ್ಥಕವಾಗುವದು" (17:9, 10).

ಹೂಷೈ ಹೇಳಿದ ಸಲಹೆಗಳಲ್ಲಿ, ಸತ್ಯದ ಒಂದು ತುಣುಕು ಸಹ ಇರಲಿಲ್ಲ. ಹೊಡೆಯಲ್ಪಟ್ಟ ದಾವೀದನು ನಡುಗುತ್ತಾ ಯೊರ್ದನ್‌ನಿನ ಬಳಿ ಕುಳಿತಿದ್ದನು. ಯಾವುದೇ ಯುದ್ಧದ ಯೋಜನೆ

ಗಳೂ ಅವನ ಮನಸ್ಸಿನಲ್ಲಿರಲಿಲ್ಲ. ಅವನು ರೋಷ ಗೊಂಡ ಹೆಣ್ಣು ಕರಡಿಯಂತೆ ಇರದೆ; ಏಟುತಿಂದ ನಾಯಿಯಂತಿದ್ದನು. ದಾವೀದನ, ಖ್ಯಾತಿಯು, ಅಬ್ಷಾಲೋಮನಲ್ಲಿಯೂ, ಅವನ ಯುದ್ಧ ವೀರರ ಮನಸ್ಸಿನಲ್ಲಿಯೂ ಪ್ರಶ್ನಾರ್ಥಕ ಚಿಹ್ನೆಯಾಗಿತ್ತು.

ಹೀಗಿರುವದರಿಂದ ನನ್ನ ಆಲೋಚನೆಯನ್ನು ಕೇಳು ಇಸ್ರಾಯೇಲ್ಯರೊಳಗಿಂದ ಸಮುದ್ರದ ಮರಳಿನಷ್ಟು ಸೈನ್ಯವನ್ನು ಕೂಡಿಸಿ ನೀನೂ ಅವರ ಜೊತೆಯಲ್ಲಿ ಯುದ್ಧಕ್ಕೆ ಹೋಗು,[20] ನಂತರ ಜಯವು ನಿನ್ನದೇ ಎಂದು ತಿಳಿದು ಬರುತ್ತದೆ ಅಂದನು. ಅವರು ಇದನ್ನು ಮಾಡುವದಾದರೆ, ದಾವೀದನನ್ನು ಅವನ ಜನರನ್ನು ಪುಡಿ ಮಾಡುವದಕ್ಕೆ ಸಾಧ್ಯ. ಹೂಷೈಯನ ದೃಷ್ಟಿಯಲ್ಲಿ ದಾವೀದನ ಸೋಲು ಶೋಭಾಯಮಾನ ವಾಗಿತ್ತು. ಇದರಿಂದ ಅಬ್ಷಾಲೋಮನು, ಜಯ ಹೊಂದಿದವನಾಗಿ, ಯೆರುಸಲೇಮಿನಲ್ಲಿ ಮೆರವಣಿಗೆ ಬರಬಹುದು ಎಂದು ತಿಳಿದನು. ಅನಂತರ ಅವನ ಸಲಹೆಗಾರರು ಹೇಳಿದ್ದು. "ಅರ್ಕೀಯನಾದ ಹೂಷೈಯನ ಆಲೋಚನೆಯು ಅಹೀತೋಫೆಲನ ಆಲೋಚನೆಗಿಂತಲೂ ಒಳ್ಳೇದಾಗಿದೆ ಅಂದರು'' (17:14). ಹೀಗೆ, ಅಹೀತೋಫೆಲನ ಆಲೋಚನೆಯನ್ನು ನಿರರ್ಥಕಪಡಿಸು ಎಂಬುದಾಗಿ ದಾವೀದನು ದೇವರಿಗೆ ಮಾಡಿದ ಪ್ರಾರ್ಥನೆಗೆ ಇದು ಉತ್ತರ ವಾಗಿತ್ತು.

ಅಹೀತೋಫೆಲನು ತನ್ನ ಆಲೋಚನೆಯು ನಡೆಯಲಿಲ್ಲವೆಂದು ತಿಳಿದು ಕತ್ತೆಗೆ ತಡಿಹಾಕಿಸಿ ಕೂತುಕೊಂಡು ತನ್ನ ಊರಿಗೆ ಹೋಗಿ ಮನೆಯಲ್ಲಿ, ವ್ಯವಸ್ಥೆ ಮಾಡಿ ಉರುಲು ಹಾಕಿಕೊಂಡು ಸತ್ತನು (17:23).[21]

ಹೂಷೈ ದಾವೀದನಿಗಾಗಿ ಸ್ವಲ್ಪ ಸಮಯವನ್ನು ಉಳಿಸಿದ್ದನು. ಆದರೂ ಅಬ್ಷಾಲೋಮನು ತನ್ನ ಮನಸ್ಸನ್ನು ಬದಲಾಯಿಸಿ, ತನ್ನ ತಂದೆಯನ್ನು ಹಿಂದಟ್ಟುವದಕ್ಕೆ ತಡಮಾಡನು ಎಂದು ತಿಳಿದಿದ್ದನು. ಹೂಷೈ ರಹಸ್ಯವಾಗಿ ಯಾಜಕರುಗಳಾದ ಚಾದೋಕ್ ಮತ್ತು ಎಬ್ಯಾತರರನ್ನು ಸಂಧಿಸಿ ಅವರಿಗೆ, "ನೀವು ಬೇಗನೆ ಅರಸನಾದ ದಾವೀದನಿಗೆ - ನೀನು ಈ ರಾತ್ರಿ ಅಡವಿಯಲ್ಲಿ ಹೊಳೆ ದಾಟುವ ಸ್ಥಳದ ಹತ್ತಿರ ಇಳುಕೊಳ್ಳಬೇಡ; ಶೀಘ್ರವಾಗಿ ಹೊಳೆದಾಟಿ ಮುಂದೆ ಹೋಗಿಬಿಡು; ಇಲ್ಲವಾದರೆ ನೀನೂ ನಿನ್ನ ಜನರೂ ನಾಶವಾಗುವಿರಿ ಎಂದು ಹೇಳಿ ಕಳುಹಿಸಿರಿ ಅಂದನು'' (17:16).

ಚಾದೋಕ್ ಮತ್ತು ಎಬ್ಯಾತಾರರು, ತಮ್ಮ ಮಕ್ಕಳಾದ, ಯೋನಾತಾನ್ ಮತ್ತು ಅಹಿಮಾಚರಿಗೆ,[22] ದಾಸಿಯ ಮೂಲಕ ವರ್ತಮಾನವನ್ನು ಕಳುಹಿಸಿದರು. ಆ ಯುವಕರು ದಾವೀದನಿಗೆ ಈ ವಿಷಯವನ್ನು ಹೇಳಲು ಹೊರಟಾಗ, ಸಿಕ್ಕಿ ಬಿದ್ದರು. ಆದರೆ ಇಬ್ಬರು ಗಂಡ ಹಂಡತಿಯರು[23] ಅವರನ್ನು ಬಾವಿಯಲ್ಲಿ ಅಡಗಿಸಿಡುವ ಮೂಲಕ ರಕ್ಷಿಸಿದರು. ಈ ರೀತಿ ಯಾಗಿ ತಪ್ಪಿಸಿಕೊಂಡು ದಾವೀದನಿಗೆ ವರ್ತಮಾನವನ್ನು ತಿಳಿಸಿದರು. ರಾತ್ರಿಯಲ್ಲಿ ಹೊಳೆ ದಾಟುವದು ಕಷ್ಟವಾದದ್ದು, ಆದರೂ ದಾವೀದನೂ ಅವನ ಜನರು ಹೊಳೆಯನ್ನು ದಾಟಿದರು. "ಉದಯವಾದಾಗ ದಾಟಬೇಕಾದವನೊಬ್ಬನು ಇರಲಿಲ್ಲ'' (17:22).

ಆ ಸಂದರ್ಭದಲ್ಲಿ ದಾವೀದನ ಜೀವವನ್ನು ಕಾಪಾಡುವಂಥ ಜವಾಬ್ದಾರಿಯುಳ್ಳ ಜನರ ಕುರಿತಾಗಿ ಗಮನಿಸಿ: ಹೂಷೈ - ಚಾದೋಕ್ - ಎಬ್ಯಾತಾರರು ಸೇವಕಳಾದ ದಾಸಿ - ಯೋನಾತಾನ್ - ಮತ್ತು ಅಹಿಮಾಚನು ದೇವರು ಅದ್ಭುತವಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಾನೆ. ಈ ಒಂದು ಸಂದರ್ಭದಲ್ಲಿಯೇ ದಾವೀದನು "ಯೆಹೋವನು ಸ್ತೋತ್ರಕ್ಕೆ ಅರ್ಹನು. ಆತನಿಗೆ ನಾನು ಮೊರೆಯಿಡಲು *ಆತನು ನನ್ನನ್ನು ಶತ್ರುಗಳಿಂದ ರಕ್ಷಿಸುತ್ತಾನೆ*'' (ಕೀರ್ತನೆ 18:3; ಒತ್ತಿ ಹೇಳಿದ್ದು ನನ್ನದು).[24]

ದಾವೀದನಿಗೆ ದೇವರ ಸಹಾಯವು ಇನ್ನೂ ಅವಶ್ಯವಿತ್ತು; ದಾವೀದನೂ ಮತ್ತು ಅವನ ಜನರು ಯೊರ್ದನ್‌ನಿನ ಪೂರ್ವಕ್ಕೆ ಸುರಕ್ಷಿತವಾಗಿ ಸೇರಿ, ಮುಂದೆ ಮನವಿಗೆ ಬಂದರು. ಮಹನಯಿಮಿ, ಈಷ್ಬೋಶೆತನ ರಾಜಧಾನಿಯಾಗಿತ್ತು. ಅಲ್ಲಿ ಮೂರು ಜನರು ಕೆಲವು

ಪದಾರ್ಥಗಳೊಂದಿಗೆ ದಾವೀದನನ್ನು ಸಂಧಿಸಿದರು. ಬೈಬಲನ್ನು ಓದುವವರಿಗೆ ಇವರ ಹೆಸರುಗಳು ದುಸ್ಪಷ್ಟದಂತೆ: "ರಬ್ಬಾ ಊರಿನವನಾದ ನಾಹಾಷನ ಮಗನಾದ ಶೋಬಿ, ಲೋದೆ ಬಾರಿನ ಅಮ್ಮೀಯೇಲನ ಮಗನಾದ ಮಾಕೀರ್, ರೋಗೆಲೀಮ್ ಊರಿನ ಗಿಲ್ಯಾದ್ಯನಾದ ಬರ್ಜಿಲ್ಲೈ ಎಂಬವರೆ" (17:27). "ಇವರು ದಾವೀದನಿಗೂ ಅವನ ಜನರಿಗೂ ಹಾಸಿಗೆ, ಬಟ್ಟಲು, ಮಡಕೆ ಇವುಗಳನ್ನೂ ಊಟಕ್ಕಾಗಿ ಗೋದಿ ಜವೆಗೋದಿ ಹಿಟ್ಟು ಹುರಿಗಾಳು ಅವರೆ ಅಲಸಂದಿ ಬೇಳೆ ಜೇನುತುಪ್ಪ ಬೆಣ್ಣೆ ಕುರಿ ಹಸುವಿನ ಗಿಣ್ಣ ಇವುಗಳನ್ನೂ ತಂದುಕೊಟ್ಟರು, ಜನರು ಅರಣ್ಯ ಪ್ರಯಾಣದಿಂದ ಹಸಿದವರೂ ದಣಿದವರೂ ಬಾಯಾರಿದವರೂ ಆಗಿದ್ದಾರೆ ಅಂದುಕೊಂಡು ಇವುಗಳನ್ನು ತಂದರು" (17:28, 29).

ದಾವೀದನಲ್ಲಿಗೆ ಬಂದವರೆಲ್ಲರು ಮಿಶ್ರಣದ ಗುಂಪಿನವರಾಗಿದ್ದರು. ಶೋಬಿಯು ಅಮ್ಮೋನ್ಯನು, ಅವನು ನಾಹಾಷನ ಮಗನು. ದಾವೀದನ ದೂತರನ್ನು ಅವಮಾನ ಪಡಿಸಿದ, ಅಮ್ಮೊನ್ಯ ಅರಸನ ಸಹೋದರನು. ಮಾಕೀರನು ಲೋದೆಬಾರಿನ ಉತ್ತರದವನು. ಅವನು ಮೆಫೀಬೋಶೆತನನ್ನು ಸಂರಕ್ಷಿಸಿದನು. (ಮಾಕೀರನು ದಾವೀದನಿಗೆ ಪರೋಪ ಕಾರಿಯಾಗಿದ್ದರಿಂದ, ಚೀಬನು, ಮೆಫೀಬೋಶೆತನ ಕುರಿತಾಗಿ, ಅಂದರೆ, ಅವನು ಸಿಂಹಾಸನವನ್ನು ಹಿಂತಿರುಗಿ ಪಡೆಯುವ ಉದ್ದೇಶವನ್ನು ಹೊಂದಿರುವನು ಎಂದು ಸುಳ್ಳು ಹೇಳಿದನು. ಈ ರೀತಿಯಾಗಿ ಒಂದು ವೇಳೆ ಮೆಫಿಬೋಷೆತನು ಒಳ ಸಂಚು ಮಾಡಿದ್ದರೆ, ಅವನೊಂದಿಗೆ ಇವನ ಪಾಲು ಸಹ ಇರುವದಕ್ಕೆ ಸಾಧ್ಯವಾಗಿತ್ತು.) ಮೂರನೆಯವನು ಬರ್ಜಿಲ್ಲೈ, ಅವನು ಮರುಳುಗಾಡಿನ ಐಶ್ವರ್ಯವುಳ್ಳ ನಾಯಕನಾಗಿದ್ದನು. ಅವನು ಗಿಲ್ಯಾದಿನ ಮಹನಯಿಮಿನಲ್ಲಿ ವಾಸವಾಗಿದ್ದನು.

ಈ ಮನುಷ್ಯರು ಅವಶ್ಯವಾದ ಸಾಮಾಗ್ರಿಗಳನ್ನು ಸರಬರಾಜು ಮಾಡುವಂಥದ್ದು. ಅವನ ಸ್ನೇಹಿತರ ಸಹಾಯದ ಹಸ್ತವು ಅವನೊಂದಿಗಿತ್ತು, ಮತ್ತು ದಾವೀದನು ಸ್ನೇಹಿತ ರಿಗೆ ತೋರಿದ ಕರುಣೆಯು ಈ ರೀತಿಯಲ್ಲಿ ಅವನಿಗೆ ಹಿಂದಿರುಗಿತು. ಈ ಎಲ್ಲಾ ಸ್ನೇಹಿತ ರುಗಳ ಮೂಲಕ, ದೇವರು ಸಹಾಯಿಸುತ್ತಿದ್ದನು ಎಂದು ನಾನು ಒತ್ತಿ ಹೇಳುತ್ತೇನೆ. ದೇವರು ನಮ್ಮನ್ನು ಶಿಕ್ಷಿಸುವಾಗಲೂ ನಮ್ಮನ್ನು ತಳ್ಳಿ ಬಿಡುವದಿಲ್ಲ.

## ಅವನ ಹೃದಯ ಮುರಿಯಲ್ಪಟ್ಟಿತು (17:24-26; 18:1-33)

ದೇವರು ವಿಶೇಷವಾದ ಕಾರ್ಯವನ್ನು ದಾವೀದನಿಗೆ ಮಾಡಿದನು: ಆತನು ದಾವೀದನಿಗೆ ನೀಡಿದ ಸೈನ್ಯದ ಬಲದಿಂದ ಅವನು ತನ್ನನ್ನು ರಕ್ಷಿಸಿಕೊಂಡನು. ದಾವೀದನು ಯೆರುಸಲೇ ಮಿನಿಂದ ಹೊರಟಾಗ, ಕೇವಲ ಆರುನೂರು ಸೈನಿಕರು ಮಾತ್ರ ಅವನ ಜೊತೆಯಲ್ಲಿದ್ದರು. ಹೇಗೂ ನಾವು ಅಧ್ಯಾಯ 18ನ್ನು ಗಮನಿಸಿದರೆ, ದಾವೀದನು ತನ್ನ ಹತ್ತಿರವಿದ್ದ ಸೈನಿಕರನ್ನು ಲೆಕ್ಕಿಸಿ ಅವರ ಮೇಲೆ "ಸಹಸ್ರಾಧಿಪತಿಗಳನ್ನು" ನೇಮಿಸಿದನು (ವಚನ 1).[25] ದಾವೀದನು ಮೂರು ಅಧಿಪತಿಗಳನ್ನು ಹೊಂದಿದ್ದನು (ವಚನ 2), "ಸಹಸ್ರಗಳು" ಎಂಬ ಪದದಲ್ಲಿ ಕನಿಷ್ಟ ಎರಡು ಸಾವಿರ ಎಂಬುದಾಗಿ ದಾವೀದನ ಆರುನೂರು ಸೈನಿಕರು ಈಗ ಆರು ಸಾವಿರ ಸೈನಿಕ ರಾಗಿದ್ದರು - ಬಹುಶ ಇನ್ನೂ ಹೆಚ್ಚಾಗಿರಬಹುದು![26] ಅದೇ ಸಮಯದಲ್ಲಿ ಅಬ್ಷಾಲೋಮನೂ ಸಹ ಸೈನ್ಯವನ್ನು ಕೂಡಿಸುತ್ತಿದ್ದನು ಮತ್ತು ಸಹಜವಾಗಿ ಬಲಹೀನರನ್ನು ಆರಿಸಿಕೊಂಡು, ದಾವೀದನ ಬಳಿಗೆ ಬಂದನು.

ಕೊನೆಯದಾಗಿ, ಹೇಗೂ, ಅಬ್ಷಾಲೋಮನು ದೊಡ್ಡ ಸೈನ್ಯವನ್ನು ತೆಗೆದುಕೊಂಡು, ಯೊರ್ದನ್‌ನನ್ನು ದಾಟಿ, ಮಹನಯಿಮಿಗೆ ಹತ್ತಿರವಿದ್ದ ಗಿಲಿಯಾದಿನಲ್ಲಿ ಗುಡಾರ ಹಾಕಿದನು.[27]

ಇದು ತನ್ನನ್ನೇ ತೋರ್ಪಡಿಸುವ ಸಮಯ. ದಾವೀದನು ಸೈನ್ಯದವರಿಗೆ "ನಾನೂ ನಿಮ್ಮ ಸಂಗಡ ಬರುತ್ತೇನೆ ಅಂದನು" (18:2). ಆಗ ಅವರು ಅವನಿಗೆ, "ನೀನು ಬರಬಾರದು; ನಾವು

ಸೋತು ಓಡಿಹೋದರೆ ಶತ್ರುಗಳು ಲಕ್ಷಿಸುವದಿಲ್ಲ; ನಮ್ಮಲ್ಲಿ ಅರ್ಧ ಜನರು ಸತ್ತರೂ ಅದು ಅವರಿಗೆ ಲಾಭವಲ್ಲ;[28] ನಮ್ಮಂಥ ಹತ್ತು ಸಾವಿರ ಜನರ ಬೆಲೆ ನಿನ್ನೊಬ್ಬನಿಗೇ ಉಂಟು. ನೀನು ಊರಲಿದ್ದು ಕೊಂಡು ಅಲ್ಲಿಂದಲೇ ನಮಗೆ ಬೇಕಾದ ಸಹಾಯ ಮಾಡಬಹುದು ಅಂದರು[29]" (18:3).

ದಾವೀದನ ಪ್ರತ್ಯುತ್ತರವನ್ನು ಯೋಚಿಸಿ: "ಅರಸನು ಅವರಿಗೆ ನಿಮಗೆ ಸರಿಕಂಡ ಹಾಗೆ ಮಾಡುತ್ತೇನೆ ಎಂದು ಹೇಳಿದನು" (18:4). ದಾವೀದನು ತನ್ನ ಸ್ವ - ಅವಲಂಬನೆಯನ್ನು ಬಲವನ್ನೂ ಕಳೆದು ಕೊಂಡಿರ ಬಹುದು: ಆದರೆ ಶಿಕ್ಷೆಯಿಂದ ಅವನು, ದೀನತೆಯನ್ನು ಮತ್ತು ಮನುಷ್ಯತ್ವವನ್ನು ಸಂಪಾದಿಸಿದ್ದನು.

ನೋವು ಆಲೋಚನೆಯ ಜ್ಞಾನವನ್ನು ಕಡಿಮೆ ಮಾಡಿರಬಹುದು. ನೀವು ಶಿಕ್ಷೆಗೆ ಒಳಗಾದಾಗ, ನಿಮ್ಮನ್ನು ಇನ್ನೊಬ್ಬರು ಸಂಧಿಸುವಂಥ ಅವಕಾಶವನ್ನು ಮಾಡಿ, ನಿನಗಿಂತ ಸ್ಪಷ್ಟವಾಗಿ ವಿಷಯಗಳನ್ನು ನೋಡಬಲ್ಲ ಅವರ ಸಲಹೆಗಳಿಗೆ ಮನಸ್ಸನ್ನು ತೆರೆದಿಡಬೇಕು,

ಸೈನ್ಯದವರು ಯುದ್ಧಕ್ಕೆ ಹೊರಟಾಗ, "ನನಗೋಸ್ಕರವಾಗಿ ಯೌವನಸ್ಥನಾದ ಅಬ್ಷಾಲೋಮ ನನ್ನು ಕರುಣಿಸಿರಿ ಎಂದು ಬೇಡಿಕೊಂಡನು" (18:5). ಆದರೆ ಅಬ್ಷಾಲೋಮನ ಯುದ್ಧದ ಯೋಜನೆ ಬಹಳ ಸರಳವಾಗಿತ್ತು: "ನನ್ನ ತಂದೆಯನ್ನು ಕೊಂದು ಹಾಕಿರಿ; ಬೇರೆಯವರ ಬಗ್ಗೆ ತೊಂದರೆಯಿಲ್ಲ." ದಾವೀದನ ಯುದ್ಧದ ಗುರಿಯು ಸಹ ಸರಳವಾಗಿತ್ತು. "ನನ್ನ ಮಗನನ್ನು ಕೊಲ್ಲಬೇಡಿರಿ; ಬೇರೆಯವರ ಬಗ್ಗೆ ತೊಂದರೆಯಿಲ್ಲ."

ಅಬ್ಷಾಲೋಮನ ಸೈನ್ಯಕ್ಕೆ ಯುದ್ಧವು ನಾಶಕರವಾಯಿತು.[30] ಗಿಲ್ಯಾದಿನ[31] ಗುಡ್ಡದ ಮರಗಳ ಮಧ್ಯದಲ್ಲಿ ಯುದ್ಧ ಮಾಡುವದು ಅವರಿಗೆ ಕಷ್ಟವಾಯಿತು. ಆದರೆ ದಾವೀದನ ಸೈನ್ಯದವರಿಗೆ, ಒರಟಾದ ಪ್ರದೇಶಗಳಲ್ಲಿ ಯುದ್ಧ ಮಾಡುವ ನಿಪುಣತೆ ಇತ್ತು. ಚದುರಿ ಹೋದ ಅಬ್ಷಾಲೋಮನ ಜನರು, ಅರಣ್ಯದಲ್ಲಿ ದಿಕ್ಕು ತಪ್ಪಿದವರಾಗಿ ಅಲೆಯುತ್ತಿರುವಾಗ, ಒಬ್ಬೊಬ್ಬರಾಗಿ,[32] ಕೊಲ್ಲಲ್ಪಟ್ಟರು ಇಪ್ಪತ್ತು ಸಾವಿರ ಜನರು ಅಸುನೀಗಿದರು.[33]

ಮಹನಯಿಮಿನಲ್ಲಿ, ಕಾದು ಕೊಂಡಿದ್ದ ದಾವೀದನು, ಎಷ್ಟು ನಷ್ಟವಾಯಿತು ಎಂದು ಯೋಚಿಸಲಿಲ್ಲ. ಯಾರು ಗೆದ್ದರು ಎಂಬುದಾಗಿಯೂ ಅಲ್ಲ. ಅವನು ಅವನ ಮಗನ ಬಗ್ಗೆ ಮಾತ್ರ ಯೋಚಿಸುತ್ತಿದ್ದನು. ಯಾಜಕನಾದ ಚಾದೋಕನ ಮಗನಾದ ಅಹೀಮಾಚನು ಪಟ್ಟಣದ ಕಡೆಗೆ ಓಡಿಬಂದನು. ಯೊರ್ದೋನ್‌ನಿನಲ್ಲಿ ವರ್ತಮಾನವನ್ನು ತಂದವರಲ್ಲಿ ಇವನೂ ಸಹ ಒಬ್ಬನಾಗಿದ್ದನು. ಅವನು ಒಳ್ಳೆಯ ಸುದ್ಧಿಯನ್ನು ತಂದಿರುವನು ಎಂದು ದಾವೀದನು ಭರವಸೆ ಇಟ್ಟಿದ್ದನು (ಯಾಕೆಂದರೆ ಅಪಜಯವು ಅನೇಕರನ್ನು ಪಟ್ಟಣಕ್ಕೆ ತರುವ ಸಾಧ್ಯತೆಯಿತ್ತು). ಆಗ ಅಹಿಮಾಚನು "ಎಲ್ಲವೂ ಸರಿಯಾಗಿದೆ" ಅಂದನು (18:28). ಅವನ ಹಿಂದೆಯೆ ಒಬ್ಬ ಕೂಷ್ಯನು ಓಡಿ ಬಂದನು.[34] ಅರಸನು ಅವನಿಗೆ "ಯೌವನಸ್ಥನಾದ ಅಬ್ಷಾಲೋಮನು ಸುರಕ್ಷಿತವಾಗಿದ್ದಾನೋ?" ಎಂದು ಕೇಳಿದನು. ಅವನು ಅವನಿಗೆ, "ನನ್ನ ಒಡೆಯನಾದ ಅರಸನ ಶತ್ರುಗಳಿಗೂ, ಅವನಿಗೆ ಕೇಡು ಮಾಡುವದಕ್ಕೆ ಎದ್ದು ನಿಂತವರೆಲ್ಲರಿಗೂ ಆ ಯೌವನಸ್ಥನಿಗಾದ ಗತಿಯೇ ಆಗಲಿ ಎಂದು ಉತ್ತರಕೊಟ್ಟನು!" (18:32).

> ಇದನ್ನು ಕೇಳಿ ಅರಸನು ಎದೆಯೊಡೆದವನಾಗಿ - ನನ್ನ ಮಗನೇ, ಅಬ್ಬಾಲೋಮನೇ, ನನ್ನ ಮಗನೇ, ನನ್ನ ಮಗನಾದ ಅಬ್ಷಾಲೋಮನೇ, ನಿನಗೆ ಬದಲಾಗಿ ನಾನು ಸತ್ತಿದ್ದರೆ ಎಷ್ಟೋ ಒಳ್ಳೇದಾಗುತ್ತಿತ್ತು. ಅಬ್ಷಾಲೋಮನೇ, ನನ್ನ ಮಗನೇ, ಮಗನೇ ಎಂದು ಕೂಗಿ ಅಳುತ್ತಾ ಹೆಬ್ಬಾಗಲಿನ ಮೇಲಿರುವ ಕೋಣೆಗೆ ಹೋದನು (18:33).

ನೀವು ಇಷ್ಟಪಡುವಂತೆ ನಿಮ್ಮ ಮಗುವು ಬೆಳೆಯದೇ ಇರಬಹುದು. ಅವನ ಜೀವನ ವಿಧಾನ ನಿಮ್ಮ ಆತ್ಮವನ್ನು ನೋಯಿಸಬಹುದು. ಅದು ಏನೇ ಇರಲಿ, ಅವನು ನಿಮ್ಮ ಮಗನೇ. ಅವನಿಗೆ ಅಘಾತ ಉಂಟಾಗುವಾಗ ನೀವು ದುಃಖಿಸುವಿರಿ.

ಶಿಕ್ಷೆಯು, ದುಃಖದಿಂದ ತಪ್ಪಿಸಿಕೊಳ್ಳರಾದಂತೆ ಜೊತೆಯಲ್ಲೇ ಇರುತ್ತದೆ. ನಿನಗಾಗಿ ಪ್ರಾಣ ನೀಡುವಂಥ ಸ್ನೇಹಿತರು ನಿನ್ನ ಸುತ್ತಲೂ ಇರಬಹುದು. ದೇವರು ಸಹ ನಿನ್ನೊಂದಿಗಿದ್ದು ಸಹಾಯಸುತ್ತಿರ ಬಹುದು. ಆದಾಗ್ಯೂ ಕಣ್ಣೀರು ಸುರಿಯುತ್ತಿರುತ್ತದೆ. ನಿನ್ನ ಹೃದಯವು ಮುರಿಯಲ್ಪಟ್ಟಿರುತ್ತದೆ. ಶಿಕ್ಷೆ ಮತ್ತು ನೋವನ್ನು ಬೇರ್ಪಡಿಸಲಾಗದು. "ಪ್ರತಿಯೊಬ್ಬನು ಸ್ವಂತ ಹೊರೆಯನ್ನು ಹೊತ್ತುಕೊಳ್ಳಬೇಕು [ಅಥವಾ ಭಾರ; KJV]" (ಗಲ್ಯಾತ 6:5).

## ದಾವೀದನು ಯೋವಾಬನಿಂದ ಗದರಿಸಲ್ಪಟ್ಟನು (19:1-8ಎ)

ನಾವು ಶಿಕ್ಷೆಗೆ ಗುರಿಯಾದಾಗ, ಅದು ಕೆಟ್ಟ ಸಮಯವಾಗಿರುತ್ತದೆ. ಎಂದು ನಾನು ನಿಮಗೆ ಮೊದಲೇ ತಿಳಿಸಿದ್ದೇನೆ, ಅದನ್ನು ನಾವು ಅಲ್ಲಗಳೆಯಲು ಸಾಧ್ಯವಿಲ್ಲ. ನಮ್ಮ ಆರೋಗ್ಯ ಪೂರ್ಣ ಉದ್ವೇಗವನ್ನು ತೋರ್ಪಡಿಸುವದು. ಆರೋಗ್ಯ ಪೂರ್ಣವಾದ ಸ್ವಸ್ಥತೆಯ ಕ್ರಮವಾಗಿರುತ್ತದೆ. ಅದರಲ್ಲೇ ಮುಳುಗಿಹೋಗುವ ಸಾಧ್ಯತೆಗಳು ಸಹ ಇರುತ್ತವೆ ಎಂದು ನಾನು ತಿಳಿಸಿದ್ದೇನೆ. ಅತಿ ಹೆಚ್ಚಾಗಿ ಅದನ್ನು ಮಾಡುವಂಥದ್ದು ಆರೋಗ್ಯದಾಯಕವಲ್ಲ. ಅದು ನಮ್ಮ ಸುತ್ತ ಇರುವವರನ್ನು ಬೇಸರಕ್ಕೆ ನಡೆಸುತ್ತದೆ. ದಾವೀದನು ಅದರಲ್ಲೆ ಹೆಚ್ಚಾಗಿ ಮುಳುಗಿದ್ದನು.

ದಾವೀದನು ಜಜ್ಜಲ್ಪಟ್ಟನು ಎಂಬ ವಿಷಯ ಅರ್ಥವಾಗುವಂಥದ್ದೇ. ಅಬ್ಷಾಲೋಮನಿಗಾಗಿ ಮಾತ್ರ ದುಃಖಿಸದೆ, ತನಗೋಸ್ಕರವಾಗಿಯೂ ದುಃಖಿಸಿದನು. ಹೇಗೂ ಅವನ ದುಃಖವು ಅಸಂಭದ್ಧವಾಗಿತ್ತು. ಮತ್ತು ಯಾವುದೇ ರೀತಿಯಲ್ಲಿಯೂ ಅವನ ಮಗನಾಗಲೀ ಅಥವಾ ಅವನ ಸಿಂಹಾಸನವಾಗಲೀ ಉಳಿಯುವ ಸಾಧ್ಯತೆ ಇರಲಿಲ್ಲ. ಅವನ ವಿಪರೀತ ಹಾಗೂ ಸಾರ್ವಜನಿಕ ವಾಗಿ ತೋರಿದ ದುಃಖವು, ಅವನ ನೋವಿನ ಕುರಿತಾಗಿತ್ತು ವಿನಹ ಅದರಲ್ಲಿ ಬೇರೆಯವರ ಒಳಿತು ಇರಲಿಲ್ಲ. ಅವನೊಬ್ಬನು ಮಾತ್ರ ತನ್ನ ಪ್ರಿಯರನ್ನು ಕಳೆದುಕೊಂಡವನಾಗಿರಲಿಲ್ಲ. ಯುದ್ಧ ಭೂಮಿಯಲ್ಲಿ ಸುಮಾರು ಇಪ್ಪತ್ತು ಸಾವಿರ ಜನರು ಸಂಹಾರವಾಗಿದ್ದರು. ಮಗನಿಗಾಗಿ, ಮೊಮ್ಮಕ್ಕಳಿಗಾಗಿ ಗಂಡಂದಿರಿಗಾಗಿ, ತಂದೆಗಳಿಗಾಗಿ, ಮತ್ತು ಸಹೋದರಿಗಾಗಿ, ಇನ್ನೂ ಸಾವಿರಾರು ಜನರು ದುಃಖಪಡುತ್ತಿದ್ದರು.

ಇತರರ ಬಗ್ಗೆ ದಾವೀದನು ಚಿಂತಿಸುತ್ತಿದ್ದನು ಎಂಬುದು ಒಂದು ಮುಖ್ಯ ಅಂಶ ವಾಗಿತ್ತು ಎಂದು ಈ ಮೊದಲೇ ತಿಳಿದಿದ್ದೇವೆ. ಇದರ ನಿಮಿತ್ತ ದಾವೀದನಲ್ಲಿ ಕಿರಿದಾದ ದರ್ಶನವು ಬೆಳೆಯಿತು.

> ಅರಸನು ಅಬ್ಷಾಲೋಮನಿಗಾಗಿ ಅಳುತ್ತಾ ಗೋಳಾಡುತ್ತಾ ಇದ್ದಾನೆಂಬ ವರ್ತಮಾನವು ಯೋವಾಬನಿಗೆ ಮುಟ್ಟಿತು. ಅರಸನು ಮಗನಿಗೋಸ್ಕರ ಪ್ರಲಾಪಿಸುತ್ತಿದ್ದಾನೆಂಬದು ಎಲ್ಲಾ ಜನರಿಗೂ ಗೊತ್ತಾದದರಿಂದ ಅವರ ಜಯಘೋಷವು ಗೋಳಾಟವಾಯಿತು. ಜನರು ಆ ದಿವಸ ಯುದ್ಧದಲ್ಲಿ ಸೋತು ಓಡಿ ಬಂದವರೋ ಎಂಬಂತೆ ನಾಚಿಕೆಯಿಂದ ಕಳ್ಳತನ ವಾಗಿ ಊರನ್ನು ಹೊಕ್ಕರು (19:2, 3).

ಅವನ ದುಃಖವು, ಅವನ ಹಿಂಬಾಲಕರ ಜೀವಿತದ ಮೇಲೆ ಕಪ್ಪು ನೆರಳಿನಂತೆ ಆವರಿಸಿತ್ತು.

ರಾಯಬಾರದಲ್ಲಿ ನುರಿತವನಾದ, ಯೋವಾಬನು ಯಾವಾಗಲು ದಾವೀದನನ್ನು ಗದರಿಸಿರಲಿಲ್ಲ.[35] 19:5-7ರಲ್ಲಿ "ಯೋವಾಬನು ಅರಸನ ಬಳಿಗೆ ಹೋಗಿ, ಅವನಿಗೆ - ನಿನ್ನನ್ನು ನಿನ್ನ ಗಂಡು ಹೆಣ್ಣು ಮಕ್ಕಳನ್ನೂ ಹೆಂಡತಿಯರನ್ನೂ ಉಪಪತ್ನಿಯರನ್ನೂ ರಕ್ಷಿಸಿದಂಥ ನಿನ್ನ ಸೇವಕರನ್ನು ಈ ಹೊತ್ತು ಅಪಮಾನ ಪಡಿಸಿದಿ! ನೀನು ಶತ್ರುಗಳನ್ನು ಪ್ರೀತಿಸುವವನೂ ಮಿತ್ರರನ್ನು ದ್ವೇಷಿಸುವವನೂ ಆಗಿದ್ದೀ; ನೀನು ನಿನ್ನ ಸೇನಾಪತಿಗಳನ್ನೂ ಸೈನಿಕರನ್ನೂ ಲಕ್ಷಿಸುವವನಲ್ಲವೆಂದು ಈಗ ತೋರಿಸಿಕೊಟ್ಟೆ. ಇದರಿಂದ ಈ ಹೊತ್ತು ನಾವೆಲ್ಲರೂ ಸತ್ತು ಅಬ್ಷಾಲೋಮನೊಬ್ಬನೇ ಉಳಿದಿದ್ದರೆ ನಿನಗೆ ಸಂತೋಷವಾಗುತ್ತಿತ್ತೆಂದು ತಿಳಿಯಬೇಕಷ್ಟೆ. ಈಗ ಎದ್ದು ಹೋಗಿ ನಿನ್ನ ಸೇವಕರನ್ನು ದಯಾಭಾವದಿಂದ ಮಾತಾಡಿಸು; ಯೆಹೋವ

ನಾಣೆ, ನೀನು ಹೀಗೆ ಮಾಡದಿದ್ದರೆ ಸಾಯಂಕಾಲವಾಗುವಷ್ಟರಲ್ಲಿ ಎಲ್ಲರೂ ನಿನ್ನನ್ನು ಬಿಟ್ಟು ಹೋಗುವರು. ಯೌವನ ಕಾಲದಿಂದ ಈ ವರೆಗೆ ನಿನಗೆ ಬಂದ ಎಲ್ಲಾ ಕೇಡುಗಳಲ್ಲಿ!"[36] ಇದೇ ಹೆಚ್ಚಿನದಾಗಿರುವದು ಅಂದನು.

ಇವುಗಳು ಕಠಿಣವಾದ ಮಾತುಗಳು, ನೋಯಿಸುವ ಮಾತುಗಳು, ಆದರೂ ದಾವೀದನು ಅವರ ಸತ್ಯಾನುಸತ್ಯವನ್ನು ಅಲಕ್ಷ್ಯಮಾಡುವಂತಿರಲಿಲ್ಲ. ಯೋವಾಬನ ಮಾತುಗಳು ಅವನ ಆತ್ಮಸಾಕ್ಷಿಯನ್ನು ಎಚ್ಚಿಸುವಂತೆ ಎಚ್ಚರದ ಕರೆಯನ್ನು ನೀಡಿದವು.

ದೇವರು ನೀಡುವ ಶಿಕ್ಷೆಯ ನಿಮಿತ್ತ, ಹಿಂಸೆಯು ಹೆಚ್ಚಾದಾಗ, ನಾವುಗಳು ವಿಚಾರ ಹೀನರಾಗಿ, ನಮ್ಮ ಬಳಿ ಇರುವವರನ್ನು ನೊಂದುಕೊಳ್ಳುವಂತೆ ಮಾಡುತ್ತೇವೆ. ಆಗ ಉತ್ತಮವಾದ ಮಾತುಗಳಿಂದ ನಮ್ಮನ್ನು ಎಚ್ಚರಿಸುವಂತ ಸ್ನೇಹಿತರ ಅವಶ್ಯ ನಮಗಿರುತ್ತದೆ. ಆ ಸಮಯದಲ್ಲಿ ಅವರ ಧೈರ್ಯವು ನಮ್ಮನ್ನು ತಲ್ಲಣಗೊಳಿಸುತ್ತದೆ. ಆದರೇ ಅವರೇ ನಿಜವಾದ ಸ್ನೇಹಿತರು. ಬಹುಶ ಅವರೇ ನಮಗಿರುವ ಉತ್ತಮ ಸ್ನೇಹಿತರು. "ಮಿತ್ರನು ಮಾಡುವ ಗಾಯಗಳು ಮೇಲಿಗಾಗಿಯೇ!" (ಜ್ಞಾನೋಕ್ತಿ 27:6ಬಿ).

ಆಗ ದಾವೀದನು ತನ್ನ ದುಖದ ಕೋಣೆಯನ್ನು ಬಿಟ್ಟು ಊರು ಬಾಗಲಲ್ಲಿ ಕೂತುಕೊಂಡನು, ಮತ್ತು ಅಲ್ಲಿ ನೆರೆದು ಬಂದವರನ್ನು ವಾತ್ಸಲ್ಯದಿಂದ ನೋಡಿದನು.[37] ಕೆಲವರೊಂದಿಗೆ ಅತ್ತನು. ಕೆಲವರನ್ನು ವಂದಿಸಿದನು ಕೆಲವರನ್ನು ಶ್ಲಾಘಿಸಿದನು. ಕೊನೆಯದಾಗಿ ಜನರು ಜಯವನ್ನು ಆಚರಿಸಿದರು.

ದುಖ ಪಡುವದಕ್ಕೂ ಸಮಯವಿದೆ, ಮತ್ತು ಪುನ ಜೀವಿತವನ್ನು ಮುಂದುವರಿಸುವದಕ್ಕೂ ಸಮಯವಿದೆ (ಪ್ರಸಂಗಿ 3:4). ನಮ್ಮ ನೋವನ್ನು ವಾಸಿ ಮಾಡಿಕೊಳ್ಳಲು ಸಮಯವಿದೆ ಮತ್ತು ನಮ್ಮ ಸ್ವಾರ್ಥದ ಕತ್ತಲ ಕೋಣೆಯನ್ನು ಬಿಟ್ಟು ಬಂದು ಇತರರ ನೋವನ್ನು ನಿವಾರಿಸುವ ಸಹಾಯವನ್ನೂ ಸಹ ಮಾಡುವದಕ್ಕೆ ಸಮಯವಿದೆ.

## ಅವನು ಸಮಾಧಾನವನ್ನು ನಿರ್ಮಿಸಲು ಪ್ರಯತ್ನಿಸಿದನು (19:8ಬಿ-20: 26)

ಒಳಸಂಚು ಕೆಲವು ವಾರಗಳ ಮಾತ್ರ ಚಾಲನೆಯಲ್ಲಿತ್ತು. ಅಂತರ್ ಯುದ್ಧವು ನಿಗದಿತ ಸಮಯದಲ್ಲಿ ಅಂತ್ಯವಾಗಿತ್ತು. ಇದರ ಅರ್ಥ ಹಿಂದಿನದೆಲ್ಲವೂ ಸರಿಯಾಯಿತು ಎಂಬುದಾಗಿ ಅಲ್ಲ. ಅನಂತರ ಉಂಟಾದ ಇಬ್ಭಾಗದ ಸಮಸ್ಯೆಯು ಮೂಲ ಸಮಸ್ಯೆಗಿಂತ ನಾಶನಕರವಾಗಿತ್ತು ಅಧ್ಯಾಯ 19ರ ಕಡೆಯ, ಭಾಗದಲ್ಲಿ ಹಳೆಯದನ್ನೆಲ್ಲಾ ತೆಗೆದುಹಾಕಿ, ಸಮಾಧಾನವನ್ನು ಸ್ಥಾಪಿಸಲು ದಾವೀದನು ಪ್ರಯತ್ನಿಸಿದನು.

ದಾವೀದನು ಯೆರೂಸಲೇಮಿಗೆ ಹಿಂತಿರುಗಿದ ನಂತರ, ಅವನು ಏನು ಮಾಡಬಹುದಿತ್ತು. ಅಥವ ಮಾಡಬಾರದಿತ್ತು ಎಂದು ವಿವರಣೆಕಾರರು ಮತ್ತು ಬರಹಗಾರರು, ಎರಡನೇ ದರ್ಜೆಯ ಊಹೆಯನ್ನು ಮಾಡಿದ್ದರು: (1) ದಾವೀದನು ಗೊಂದಲಕ್ಕೊಳಗಾಗಿದ್ದನು ಮತ್ತು ಅವನ ಹೃದಯವು ಇನ್ನೂ ನೋವಿನಿಂದಲೂ, ಪಾಪದ ಅರಿವಿನಿಂದಲೂ ಕೂಡಿತ್ತು. (2) ಅವನು - ತಕ್ಷಣವೇ ಕೆಲವು ನಿರ್ದಾರಗಳನ್ನು ಮಾಡಬೇಕಿತ್ತು. ಅದು ಕಷ್ಟಕರವಾಗಿತ್ತು. (3) ಈಗಾಗಲೇ ಅಲ್ಲಿ ಉಂಟಾಗಿದ್ದ ಗೊಂದಲವನ್ನು, ಸ್ವಚ್ಛ ಮಾಡಲು ಪ್ರಯತ್ನ ಮಾಡುವದರಿಂದ ನೀನು ಗೆದ್ದವನಾಗಿದ್ದಿ ಎಂಬುದಾಗಿ ತಿಳಿಯಬಾರದು. ಎಲ್ಲವುಗಳ ಕುರಿತು ಯೋಚಿಸಬೇಕು ದಾವೀದನ ಸಮಾಧಾನದ ಪುನ ಸ್ಥಾಪನೆಯ ವಿಷಯವು ಗುರುತರವಾಗಿತ್ತು.

18:16, 17ರಲ್ಲಿ ನಿಲ್ಲಿಸಿದ್ದ ವಿಷಯವನ್ನು 19:8ರ ಕಡೆಯ ಭಾಗದಲ್ಲಿ ಮುಂದುವರಿಸಲಾಗಿದೆ. ಅಪಜಯ ಹೊಂದಿದ ಇಸ್ರಾಯೇಲ್ಯರು, ಮನೆಗೆ ಹಿಂದಿರುಗಿ, ಅಬ್ಷಾಲೋಮನನ್ನು ಅರಸನನ್ನಾಗಿ ಅಭಿಷೇಕ ಮಾಡುವ ಮೊದಲು, ಮರೆತು ಹೋದಂಥ ಒಂದು ವಿಷಯವನ್ನು ನೆನಪು ಮಾಡಿಕೊಂಡರು - ದಾವೀದನು ಮಾತ್ರ ಅವರನ್ನು ವೈರಿಗಳಿಂದ ಕಾಪಾಡಿದ್ದನು. ಅವರ ಸಮೃದ್ಧಿಗೆ ದಾವೀದನೇ ಕಾರಣನಾಗಿದ್ದನು. 10ನೇ ವಚನದ ಕಡೆಯ ಭಾಗದ

ಅವರ ಮಾತುಗಳನ್ನು ಗಮನಿಸಿ: "ಹೀಗಿರುವಲ್ಲಿ ಅರಸನಾದ ದಾವೀದನನ್ನು ಕರಕೊಂಡು ಬರಬಾರದೇ?" (ಒತ್ತಿ ಹೇಳಿದ್ದು ನನ್ನದು!) ಈ ಮಾತು ನಿಮಗೆ ಕೇಳಿಸುವದಿಲ್ಲವೇ?

"ನಾವು ಈ ಪರಿಸ್ಥಿತಿಗೆ ಬರಲು *ನಾನು* ಕಾರಣನಲ್ಲ. ಇದಕ್ಕೆ *ನೀನೇ* ಕಾರಣ!"

"ನೀನು ನನಗೆ ಸುಳ್ಳು ಹೇಳುತ್ತಿರುವೆ. ಯಾಕೆಂದರೆ ಅಬ್ಷಾಲೋಮನನ್ನು ಅಭಿಷೇಕಿಸುವಾಗ, ಅಲ್ಲಿ ನಿನ್ನನ್ನು ನೋಡಿದ್ದೇನೆ!"

"ನಾನು ಅದನ್ನು ನೋಡುವದಕ್ಕೆ ಬಂದಿದ್ದೆನು. ಆದರೆ ಅವೆಲ್ಲವುಗಳನ್ನು ನಾನು ವಿರೋಧಿಸಿದ್ದೆ!"

"ಅದು ನಿಜವೇ! ಆದರೆ ಈಗ ನಮಗೆ ಅರಸನಿಲ್ಲ - ಆದುದರಿಂದ ಫಿಲಿಷ್ಟಿಯರು ನಮ್ಮ ಮೇಲೆ ಯುದ್ಧಕ್ಕೆ ಬರಬಹುದು. ಯಾರಾದರು ದಾವೀದನನ್ನು ಹಿಂದಕ್ಕೆ ಕರೆತರ ಬೇಕು."

"ಸರಿ, ನೀನೇ ಅದನ್ನು ಮಾಡು."

"ಇಲ್ಲ, *ನೀನು* ಅದನ್ನು ಮಾಡು."

ಉತ್ತರದಲ್ಲಿನ ಕುಲದವರು ಮಾತಾಡಿದ ವಿಷಯಗಳು ದಾವೀದನಿಗೆ ತಿಳಿದು ಬಂತು. ಆದರೆ ದಾವೀದನು ಯೂದ ಕುಲದ ಬಗ್ಗೆ ಯೋಚಿಸುತ್ತಿದ್ದನು. ಯೂದ ಕುಲದವರು, ಹೆಬ್ರೋನಿನಲ್ಲಿ ನಡೆದ ಒಳಸಂಚಿನಲ್ಲಿ ಅತಿಯಾಗಿ ಭಾಗಿಯಾಗಿದ್ದರು: ಅಬ್ಷಾಲೋಮನೂ; ಅಹಿತೋಫೆಲನೂ, ಅವನ ಸಲಹೆಗಾರರೂ; ಮತ್ತು ಸೈನ್ಯಾಧಿಕಾರಿಯಾಗಿದ್ದ ಅಮಾಸನು. ಇವರೆಲ್ಲರು ಯೂದಾಯದ ಮುಖ್ಯ ವ್ಯಕ್ತಿಗಳಾಗಿದ್ದರು. ದಾವೀದನು ಚಾದೋಕ್ ಮತ್ತು ಎಬ್ಯಾತಾರರ ಮುಖಾಂತರ, ಯೂದಾಯದ ಹಿರಿಯರುಗಳು ಅವನನ್ನು ಹಿಂದಕ್ಕೆ ಕರೆ ತರುವಂತೆ ಹೇಳಿ ಕಳುಹಿಸಿದನು. ಆದುದರಿಂದ ಅವರ ದುಷ್ಟ ಪರ್ವತನೆಯನ್ನು ಅವರ ಮೇಲೆ ಹೋಲಿಸಲಿಲ್ಲ ಎಂಬುದನ್ನು ನಾಯಕನು ತಿಳುಕೊಳ್ಳುವಂತೆ ಮಾಡಿದನು.

ಮುಂದೆ, ದಾವೀದನು ಯೋವಾಬನಿಗೆ ಬದಲಾಗಿ, ಅಮಾಸನನ್ನು ಸೇನಾಧಿಪತಿಯನ್ನಾಗಿ ನೇಮಿಸಿದನು.[38] ಅಮಾಸನು ರೂಪಿಸಿದ ಸಂಚಿನ ನಿಮಿತ್ತ ಅವನನ್ನು ಗಲ್ಲಿಗೇರಿಸಬಹುದಿತ್ತು, ಆದರೆ ದಾವೀದನು ಅವನನ್ನು ಕೃಪೆಯಿಂದ ಕ್ಷಮಿಸಿದನು. ಅವನನ್ನು ಸೇನಾಪತಿಯನ್ನಾಗಿ ಮಾಡುವದರ ಮೂಲಕ, ದಾವೀದನು ತನ್ನ ಸ್ನೇಹದ ಹಸ್ತವನ್ನು ಯೂದಾಯದವರಿಗೂ ತೋರಿಸಿದನು (ಹೇಗಂದರೆ, ಅಮಾಸನು ಯೂದಾ ಕುಲದವನಾಗಿದ್ದನು) ಮತ್ತು ಇಸ್ರೇಯೆಲಿಗೂ ಸ್ನೇಹ ತೋರಿಸಿದನು (ಅಮಾಸನು ಇಸ್ರೇಯೆಲಿಗೂ ಸೇನಾಪತಿಯಾಗಿದ್ದನು).

ದಾವೀದನು ಅಪರಾಧಿಯಾಗಿದ್ದನು, ಅಪರಾಧ ಮಾಡಿದವರ ಸಂಗಡ ಸಂಬಂಧವನ್ನು ಪುನ ಸ್ಥಾಪಿಸಿದನು. ಈ ಒಂದು ಮಾದರಿಯನ್ನು ನಾವೆಲ್ಲರೂ ಅನುಕರಿಸಬೇಕು. ಪರೀಕ್ಷೆಗೆ ಒಳಗಾಗುವುದೇ ಶಿಕ್ಷೆಯ ಉದ್ದೇಶ ಎಂದು ನೆನಪು ಮಾಡಿಕೊಳ್ಳಿರಿ. ನಾವು ಕ್ಷಮಿಸುವ ಹೃದಯವನ್ನು ಪಡೆದು ಕೊಂಡಿದ್ದೇವೋ ಎಂಬುದಾಗಿ ಪರೀಕ್ಷಿಸಿಕೊಳ್ಳಬೇಕು (ಎಫೆಸ 4:31, 32). ದಾವೀದನ ಕ್ರಿಯೆಗಳು ಯೂದಾಯದವರಿಗೆ ಮೆಚ್ಚಿಗೆಯಾಯಿತು. ಆಗ ಯೆಹೂದ್ಯರೆಲ್ಲರೂ ಏಕ ಮನಸ್ಸಿನಿಂದ ಅರಸನ ಕಡೆಗೆ ತಿರುಗಿಕೊಂಡು ಅವನಿಗೆ, "ನೀನೂ ನಿನ್ನ ಎಲ್ಲಾ ಸೇವಕರೂ ತಿರಿಗಿ ಬನ್ನಿರಿ ಎಂದು ಹೇಳಿಕಳುಹಿಸಿದರು" (19:14).

ದಾವೀದನೂ, ಅವನ ಕುಟುಂಬ, ಮತ್ತು ಅವನ ಸ್ನೇಹಿತರೆಲ್ಲರೂ, ಯೆರೂಸಲೇಮಿಗೆ ಹೊರಟರು. ಮಹನಯಿಮಿನಲ್ಲಿ[39] ದಾವೀದನಿಗೆ ಅವಶ್ಯ ವಸ್ತುಗಳನ್ನು ಸರಬರಾಜು ಮಾಡಿದ ಬರ್ಜಿಲ್ಲೈ ಸಹ ಅವನ ಜೊತೆಯಿದ್ದನು. ಅವರು ಯೊರ್ದನ್ ನದಿ ತೀರಕ್ಕೆ ಬಂದಾಗ, ದಾವೀದನು ಕೃತಜ್ಞತೆಯ ಭಾವದಿಂದ, ಮುದುಕನಾದ ಬರ್ಜಿಲ್ಲೈಯನ್ನು ತನ್ನೊಂದಿಗೆ ಯೆರೂಸಲೇಮಿಗೆ ಹೋಗಲು ಬೇಡಿಕೊಂಡನು. ಬರ್ಜಿಲ್ಲೈಯು ತಾನು ಮುದುಕನಾಗಿದ್ದು, ಅರಮನೆಯ ಸುಖಭೋಗಗಳನ್ನು ಅನುಭವಿಸಲು ಸಾಧ್ಯವಿಲ್ಲ ಅಂದನು. ಆದರೆ ಅವನ ಮಗನ[40] ಕಡೆಗೆ ಕೈ ತೋರಿಸಿ, ಹೇಳಿದ್ದೇನೆಂದರೆ, "ಇಲ್ಲಿ ನಿನ್ನ ಸೇವಕನಾದ ಕಿಮ್ಹಾಮನಿರುತ್ತಾನೆ. ನನ್ನ ಒಡೆಯನಾದ ಅರಸನು ಇವನನ್ನು ಕರಕೊಂಡು ಹೋಗಿ ತನ್ನ ಇಷ್ಟವಿದ್ದಂತೆ ಇವನಿಗೆ

ದಯೆತೋರಲಿ ಎಂದನು" (19:37). ಅದಕ್ಕೆ ಅರಸನು ಒಪ್ಪಿಕೊಂಡನು. ನಂತರ ದಾವೀದನು ಆ ಮುದುಕನನ್ನು ಮುದ್ದಿಟ್ಟು ಆಶೀರ್ವದಿಸಿದನು. ನಿಮ್ಮ ಕಷ್ಟಕಾಲದ ಆಪ್ತರನ್ನು ಮರೆಯದಿರಿ!

ದಾವೀದನು ಯೊರ್ದನಿಗೆ ಬಂದಾಗ, ಯೂದಾಯದಿಂದ ಆಕಸ್ಮಿಕವಾಗಿ ಒಂದು ದೊಡ್ಡ ಗುಂಪು ಅವನನ್ನು ಸಂಧಿಸಿ, ಅರಸನನ್ನು ಮನೆಗೆ ಆಹ್ವಾನಿಸಿದರು. ಅರಸನು ಹತ್ತಿರವಾಗುತ್ತಿದ್ದಂತೆ, ಅವರ ಸಂತೋಷದ ಧ್ವನಿಯನ್ನು ನಾನು ಕೇಳುತ್ತೇನೆ - ರಾತ್ರಿಯಲ್ಲಿ ತಪ್ಪಿಸಿಕೊಂಡು ಹೋದವನಿಗೆ ಎಂಥಾ ಒಂದು ಘನತೆ!

ಕೆಲವು ಸ್ವಾರ್ಥಿಗಳು ಸಹ ಅವನನ್ನು ಸಂಧಿಸಿದರು, ಈ ಒಂದು ಸಂತೋಷದ ಸಮಯವನ್ನು ಸ್ವಾರ್ಥಕ್ಕಾಗಿ ಅವಕಾಶ ಮಾಡಿಕೊಂಡರು. ಚೀಬನು ಸಹ ಅಲ್ಲಿದ್ದನು, ದಾವೀದನು, ಯೆರೂಸಲೇಮಿಗೆ ಬಂದು, ಮೆಫಿಬೋಷೆತನ ವಿಷಯವಾಗಿ ಕೇಳ ಬಹುದು ಎಂದು ಚೀಬನು ಭಯಗೊಂಡನು. ಅರಸನ ಋಣವನ್ನು ತೀರಿಸುವ ಸಲುವಾಗಿ, ಚೀಬನು, ಅವನ ಮಕ್ಕಳು, ದಾವೀದನನ್ನು ಅವನ ಮನೆಯವರ ಸಾಮಾಗ್ರಿಗಳನ್ನು ಯೊರ್ದನ್‌ನಿಂದ ಸಾಗಿಸಿದರು.[41]

ಶಿಮ್ಮಿಯು ಸಹ ಅಲ್ಲಿದ್ದನು - ದಾವೀದನು ಯೆರೂಸಲೇಮನ್ನು ಬಿಟ್ಟು ಹೋಗು ವಾಗ, ಕಲ್ಲು ತೂರುತ್ತ ದಾವೀದನನ್ನು ಶಪಿಸಿದ ಮೂರ್ಖ ಮನುಷ್ಯನು ಇವನಾಗಿದ್ದನು. ದಾವೀದನು ತನ್ನ ರಾಜಧಾನಿಯಾದ ಯೆರೂಸಲೇಮಿಗೆ ಹಿಂದಿರುಗುತ್ತಿದ್ದ ವಿಷಯವನ್ನು ಅವನು ಕೇಳಿದಾಗ, ಅವನಿಗೆ ಭಯವಾಗಲಿಲ್ಲವೇ? ಶಿಮ್ಮಿಯು ನದಿಯ ತೀರದಲ್ಲಿ ಬೋರು ಬಿದ್ದು ಕ್ಷಮೆಗಾಗಿ ಬೇಡಿಕೊಂಡನು. "ನಾನು ಪಾಪ ಮಾಡಿದ್ದೇನೆ ಎಂದು ಒಪ್ಪಿಕೊಂಡನು" (19:20).[42] ಬೆಂಜಮೀನನ ಕುಲದಿಂದ ಸಾವಿರ ಜನರನ್ನು ಕರೆತಂದು, ಅವರ ಕಡೆಗೆ ಕೈ ಬೀಸಿ, "ಅರಸನನ್ನು ಆಹ್ವಾನಿಸುವದರಲ್ಲಿ ನಾವೇ ಮೊದಲಿಗರು ಎಂದು ತೋರಿಸಿ ದನು!"[43]

ಸಹಜವಾಗಿ, ಶಿಮ್ಮಿಯನ್ನು ಕೊಂದು ಹಾಕಲು ಅಭಿಷೈ ಸಿದ್ಧವಾಗಿದ್ದನು. ಎಲ್ಲಾ ಸಮಸ್ಯೆಗಳಿಗೂ ಅಭಿಷೈ ಬಳಿಯಲ್ಲಿ ಒಂದು ಉತ್ತರವಿತ್ತು. (ಅವನು ಪಳಗಿದ ಯುದ್ಧವೀರನು ಆದರೆ ಅಂಥವನು, ನನ್ನ ನೆರೆಯವನಾಗುವದಕ್ಕೆ ಇಷ್ಟಪಡುವದಿಲ್ಲ!) ಆದರೆ ದಾವೀದನ ಪ್ರತಿಕ್ರಿಯೆ, "ಇದು ಸಂತೋಷದ ದಿನ, ಈ ದಿನ ರಕ್ತಪಾತವಾಗಬಾರದು" ಎಂದು ಹೇಳಿ ತನ್ನ ಪಾದದ ಬಳಿ ಬೇಡುತ್ತಿದ್ದ ಚೀಬನಿಗೆ "ನಿನಗೆ ಮರಣಶಿಕ್ಷೆಯಾಗುವದಿಲ್ಲ" ಎಂದು ಪ್ರಮಾಣ ಮಾಡಿ ಹೇಳಿದನು (19:23).[44] ಯೊರ್ದನ್‌ನಿಂದ, ಯೆರುಸಲೇಮಿಗೆ ದಾವೀದನೂ ಅವನ ಸಂಗಡಿಗರು ಪ್ರಯಾಣವನ್ನು ಮುಂದುವರಿಸಿದರು. ಅವನು ಬರುತ್ತಿರುವಾಗ ರಸ್ತೆಯ ಬದಿಯಲ್ಲಿ ಜನರು ನೆರೆದು ಸಂತೋಷದಿಂದ ಆರ್ಭಟಿಸುತ್ತಿದ್ದರು.

ಅರಸನು ಯೆರುಸಲೇಮಿಗೆ ಹತ್ತಿರವಾದಾಗ, ಮೆಫಿಬೋಷೇತು ಸಹ ಅವನನ್ನು ಸಂಧಿಸಿದನು. ಆ ಯೌವನಸ್ಥನು ಮನೆಯಿಲ್ಲದ ತಿರುಕನಂತೆ ಕಂಡನು. "ಅರಸನು ಯೆರುಸಲೇಮನ್ನು ಬಿಟ್ಟಂದಿನಿಂದ ಸುರಕ್ಷಿತವಾಗಿ ಹಿಂದಿರುಗುವವರೆಗೂ ಇವನು ತನ್ನ ಕಾಲುಗಳನ್ನು ಕಟ್ಟಿಕೊಂಡಿದ್ದಿಲ್ಲ, ಮೀಸೆಯನ್ನು ಕತ್ತರಿಸಿದ್ದಿಲ್ಲ. ಬಟ್ಟೆಗಳನ್ನೂ ಒಗೆಸಿಕೊಂಡಿದಿಲ್ಲ" (19:24). ಇದು ಮೆಫೀಬೋಶೆತನ ಬಗ್ಗೆ ಊಹೆಯಾಗಿರುವದಿಲ್ಲ. ಅವನ ಸ್ಥಿತಿ ಇದೆ ಎಂದು ಪ್ರೇರೇಪಿಸಲ್ಪಟ್ಟ ಬರಹಗಾರನು ತಿಳಿಸುತ್ತಾನೆ. ಸಿಂಹಾಸನವನ್ನು ಕಿತ್ತುಕೊಳ್ಳುವಂಥ ಮನೋ ಭಾವನೆವುಳ್ಳವನು ಈ ರೀತಿಯಾಗಿ ಪ್ರತಿಕ್ರಿಯಿಸುವದಿಲ್ಲ. ಮನಮುರಿಯಲ್ಪಟ್ಟ ಮನುಷ್ಯನ ವಿರೋಧವಾಗಿ ಆತನ ಅರಸನ ಮತ್ತು ಸ್ನೇಹಿತರ ಓಟ ಸರಿಯಾದದ್ದೆ.

ಮೆಫೀಬೋಶೆತನ ಬಾಹ್ಯ ಚಹರೆಯು ಜೀಬನ ಕಥೆಯನ್ನು ಎರಡನೆಯ ಸಾರಿ ಯೋಚಿ ಸುವಂತೆ ಮಾಡಿತು. "ಮೆಫೀಬೋಶೆತನೇ, ನೀನು ನನ್ನ ಸಂಗಡ ಯಾಕೆ ಬರಲಿಲ್ಲ" ಎಂದು ಕೇಳಲು? (19:25). ಅವನ ಪ್ರತ್ಯುತ್ತರವು ಹೃದಯವನ್ನು ಬಲವಾಗಿ ಎಳೆದಂತಿತ್ತು:

ಅವನು - ನನ್ನ ಒಡೆಯನೇ, ಅರಸನೇ, ನನ್ನ ಸೇವಕನು ನನ್ನನ್ನು ವಂಚಿಸಿದನು. ಕುಂಟನಾದ ನಾನು ಅವನಿಗೆ - ಕತ್ತೆಗೆ ತಡಿಹಾಕು, ನಾನು ಕೂತುಕೊಂಡು ಅರಸನ ಜೊತೆಯಲ್ಲಿ ಹೋಗಬೇಕು ಎಂದು ಆಜ್ಞಾಪಿಸಿದೆನು. ಅವನು ಹಾಗೆ ಮಾಡದೆ ನನ್ನ ಒಡೆಯನಾದ ಅರಸನ ಬಳಿಗೆ ಬಂದು ನನ್ನ ವಿಷಯದಲ್ಲಿ ಚಾಡಿ ಹೇಳಿದನು. ಅರಸನು ದೇವದೂತರ ಹಾಗಿರುತ್ತಾನೆ.[45] ತನಗೆ ಸರಿಕಂಡದ್ದನ್ನು ಮಾಡಲಿ. ನನ್ನ ತಂದೆಯ ಮನೆಯವರೆಲ್ಲರೂ ಅರಸನಾದ ನನ್ನ ಒಡೆಯನ ದೃಷ್ಟಿಯಲ್ಲಿ ಮರಣಕ್ಕೆ ಪಾತ್ರರಾಗಿದ್ದರು. ಆದರೂ ಅವನು ತನ್ನ ಸೇವಕನಾದ ನನ್ನನ್ನು ಭೋಜನಕ್ಕೆ ತನ್ನ ಪಂಕ್ತಿಯಲ್ಲಿ ಕುಳ್ಳಿರಿಸಿಕೊಂಡನು. ಅರಸನಿಗೆ ಹೆಚ್ಚಾಗಿ ಮೊರೆಯಿಡುವದಕ್ಕೆ ನಾನೇನು ಯೋಗ್ಯನೋ? ಎಂದು ಉತ್ತರ ಕೊಟ್ಟನು (19:26-28).

"ಈಗ ನಾನೇನು ಮಾಡಲಿ ಎಂದು?" ದಾವೀದನು ಯೋಚಿಸಿದ್ಧನು ಆಗ ಅರಸನು ಅವನಿಗೆ - ಹೆಚ್ಚು ಮಾತು ಯಾಕೆ? ನೀನೂ, "ಚೀಬನೂ ಹೊಲವನ್ನು ಭಾಗಮಾಡಿಕೊಳ್ಳ ಬೇಕೆಂಬದೇ" ನನ್ನ ತೀರ್ಪು ಎಂದು ಹೇಳಿದನು (19:29). ಅದು ಪೂರ್ಣವಾದ ಉತ್ತರವಾ ಗಿರಲಿಲ್ಲ, ಆದರೆ ದಾವೀದನು ಅಪಾಯವನ್ನು ಉತ್ತಮವಾದ ರೀತಿಯಲ್ಲಿ ಪರಿಹರಿಸಿದನು.[46] ಮೆಫೀಬೋಶೆತನು ಉತ್ತರ ನೀಡಿ, ಚೀಬನು "ಎಲ್ಲವನ್ನು ತಾನೇ ತೆಗೆದುಕೊಂಡರೂ ತೆಗೆದುಕೊಳ್ಳಲಿ, ... ನನ್ನ ಒಡೆಯನಾದ ಅರಸನು ತನ್ನ ಮನೆಗೆ ಸುರಕ್ಷಿತನಾಗಿ ಬಂದದ್ದೇ ಸಾಕು" (19:30; LB).

ಅನೇಕ ಪರೀಕ್ಷೆಗಳಿಗೆ ಒಳಪಟ್ಟ ಮೇಲೆ, ನಾವು ಕೆಲವು ಸಾರಿ ಇತರರಿಗೆ, ಹೇಳಿದ, ಬೇಡವಾದ ಮಾತು, ಇತರರಿಗೆ ಊಂಟು ಮಾಡಿದ ವೇದನೆ, ಅನ್ಯಾಯದ ತೀರ್ಪುಗಳ ಬಗ್ಗೆ ನಮಗೆ ಮನವರಿಕೆಯಾಗುತ್ತದೆ. ಒಂದು ವೇಳೆ ಇದು ಸತ್ಯವಾಗಿದ್ದರೂ ಅವುಗಳನ್ನು ಸರಿಪಡಿಸಿಕೊಳ್ಳುವದಕ್ಕೆ, ದೇವರು ಅನುಗ್ರಹಿಸಿದ ಇನ್ನೊಂದು ಅವಕಾಶಕ್ಕಾಗಿ ದೇವರಿಗೆ ಸ್ತೋತ್ರ ಹೇಳಿರಿ. ಅದು ಟೂಥ್ ಪೇಸ್ಟ್‌ನ್ನು ತಿರಿಗೆ ಅದರ ಟ್ಯೂಬಿನೊಳಗೆ ಸೇರಿಸಿದಂತೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಉತ್ತಮವಾದ್ದನ್ನೇ ಮಾಡಿರಿ. ಬಹುಶ ಈ ಕಾರ್ಯವನ್ನು ಮಾಡಲು, ಶ್ಲಾಘಿಸಿದ ಮೆಫೀಬೋಶೆತನೊಂದಿಗೆ ದೇವರು ನಿಮ್ಮನ್ನು ಆಶೀರ್ವದಿಸುವನು.

## ಸಮಸ್ಯೆಗಳು ಮುಗಿದುಹೋಗಲಿಲ್ಲ (19:40-20:26)

ಎಲ್ಲೆಲ್ಲಿ ಸಮಾಧಾನವು ಎಲ್ಲೆಲ್ಲಿ ಸಂಧಾನವು, ಅವಶ್ಯವಿತ್ತೋ, ಅಂತಹ ಕಡೆಯಲ್ಲಿ ಅವುಗಳನ್ನು ಸರಿಪಡಿಸುತ್ತಾ, ದಾವೀದನು ಪಟ್ಟಣವನ್ನು ಪ್ರವೇಶಿಸಲು ಮುಂದಾದನು. ಅವನು ನೆರೆದ ಜನರನ್ನು ಅಭಿನಂದಿಸುತ್ತ ಈಗ, "ಹಿಂದಿನದೆಲ್ಲವನ್ನು ಮರೆತು, ಮುಂದಿನದನ್ನು ಸುಗಮ ಪಡಿಸಬಹುದು" ಎಂದು ಆಲೋಚಿಸಿದನು.

ಆದರೆ ಅದು ಅವನು ನೆನೆಸಿದ ರೀತಿ ನಡೆಯಲಿಲ್ಲ. ಆತನು ಸಿಂಹಾಸನಾರೂಡನಾದ ತಕ್ಷಣ. ಉತ್ತರದ ಕುಲದವರು ಮತ್ತು ಯೂದಾಕುಲದ ಪ್ರತಿನಿಧಿಗಳು ಬಂದು ಅವನನ್ನು ಮುತ್ತಿಕೊಂಡರು. ಅರಸನು ಹಿಂದಿರುಗುವ ವಿಷಯದಲ್ಲಿ, ಅವರ ಕುಲದವರಿಗೆ ಉಂಟಾದ ತಾರತಮ್ಯವನ್ನು ಕುರಿತು ಮಾತನಾಡಿದರು. ಈ ಘರ್ಷಣೆಯ, ಒಂದು ಗುಂಪು ದಾವೀದನ ಕುತ್ತಿಗೆಗೆ ಬೀಸುವ ಕಲ್ಲನ್ನು ಕಟ್ಟಿದಂತೆಯೂ, ಇನ್ನೊಂದು ಗುಂಪು ಅವನನ್ನು ಆಳವಾದ ಸಾಗರಕ್ಕೆ ಎಸೆದು ಮುಳುಗುವಂತೆಯೂ ಮಾಡಿದವು. ಈಗ ಅವನನ್ನು ಮೇಲೆಳೆಯುವದಕ್ಕೆ ಯಾರಿಗೆ ಅರ್ಹತೆಯಿತ್ತು ಎಂಬ ಆಲೋಚನೆಯನ್ನು ಅವನ ಮುಂದೆ ಇಟ್ಟರು!

ಇದಕ್ಕೆ ಸಂಬಂಧಿಸಿದಂತೆ ದಾವೀದನಿಗೆ ಅಸಂತೋಷಪಡಿಸುವ ಪಂಗಡದಲ್ಲಿ "ಉಪಯೋಗವಿಲ್ಲದ ವ್ಯಕ್ತಿಯಾದ ಶೆಬನು" (20:1) ಸಹ ತನ್ನ ದಂಗೆಯನ್ನು, ಉತ್ತರದ ಕುಲಗಳವರ ಘರ್ಷಣೆಯ ಜೊತೆಗೆ ಸೇರಿದನು, ಈ ದಂಗೆಯನ್ನು ಹತೋಟಿಗೆ ತರುವ ಸಲು

ವಾಗಿಯೂ, ಯೋವಾಬನು ತನ್ನ ಅಧಿಕಾರವನ್ನು ಪುನ ಪಡೆಯುವ ನಿಮಿತ್ತ, ಅಮಾಸನನ್ನು ಕೊಂದನು (2 ಸಮುವೇಲ 20:23ನ್ನು ಗಮನಿಸಿ)!

ದಾವೀದನು ನಿಟ್ಟುಸಿರು ಬಿಡುತ್ತಾ, ಪರಲೋಕದ ಕಡೆಗೆ ನೋಡಿ, "ಯೆಹೋವನೇ ನನ್ನನ್ನು ಬಲಪಡಿಸು" ಎಂದು ಪ್ರಾರ್ಥಿಸಿದನು!

## ಅವನು ಕರ್ತನನ್ನೇ ಅವಲಂಭಿಸಿದನು

ಈ ಪಾಠವನ್ನು ಅಂತ್ಯಗೊಳಿಸುವಾಗ ನಾವು ಈ ಪ್ರಶ್ನೆಯನ್ನು ಕೇಳಿ ಕೊಳ್ಳಬೇಕು. "ದಾವೀದನು ಮುಂದುವರಿಯಲು, ಯಾವ ರೀತಿಯಾಗಿ ಬಲವನ್ನು ಹೊಂದಿದನು?" ದೇವರು ಅವನೊಂದಿಗಿದ್ದನು ಎಂಬದೇ ಉತ್ತರ (2 ಸಮುವೇಲ 18:28, 31, ನೋಡಿರಿ). ಕೀರ್ತನೆ 3 ಮತ್ತು 4ನ್ನು ನೋಡುವದಕ್ಕಿಂತ ಮೊದಲು ಟಿಪ್ಪಣಿಯನ್ನು ನೋಡಿರಿ. ಇವುಗಳು ದಾವೀದನ ಮುಂಜಾನೆಯ ಹಾಗೂ ಸಾಯಂಕಾಲದ ಪ್ರಾರ್ಥನೆಗಳಾಗಿದ್ದವು. "ತನ್ನ ಮಗನಾದ ಅಬ್ಷಾಲೋಮನಿಂದ ತಪ್ಪಿಸಿಕೊಂಡು ಹೋದಾಗ." ಈ ಎರಡೂ ಕೀರ್ತನೆಗಳು ಈ ರೀತಿ ಪ್ರಾರಂಭವಾಗುತ್ತದೆ:

> ಯೆಹೋವನೇ, ನನ್ನ ವಿರೋಧಿಗಳು ಎಷ್ಟೋ ಹೆಚ್ಚಾ
> ಗಿದ್ದಾರೆ;
> ನನಗೆ ವೈರಿಗಳಾಗಿ ನಿಂತವರು ಬಹಳ ಮಂದಿ.
> ಅನೇಕರು ನನ್ನ ವಿಷಯದಲ್ಲಿ -
> ಅವನಿಗೆ ದೇವರಿಂದ ಸಹಾಯವು ಆಗುವದೇ
> ಇಲ್ಲವೆಂದು ಹೇಳಿಕೊಳ್ಳುತ್ತಾರೆ.
> ಆದರೂ ಯೆಹೋವನೇ, ನೀನು ನನ್ನನ್ನು ಕಾಯುವ
> ಗುರಾಣಿ;
> ನೀನು ನನ್ನ ಗೌರವಕ್ಕೆ ಆಧಾರನೂ ನನ್ನ ತಲೆಯನ್ನು
> ಎತ್ತುವಂತೆ ಮಾಡುವವನೂ ಆಗಿದ್ದೀ (ಕೀರ್ತನೆ 3:1-3).

ಈ ಮಾತುಗಳಿಂದ ಅವುಗಳು ಅಂತ್ಯವಾಗುತ್ತವೆ:

> ನಮಗೆ ಒಳ್ಳೆಯದನ್ನು ಮಾಡುವವರು ಯಾರಿದ್ದಾ
> ರೆಂದು ಅನೇಕರು ಹೇಳಿಕೊಳ್ಳುತ್ತಾರೆ.
> ಯೆಹೋವನೇ, ನೀನು ಪ್ರಸನ್ನ ಮುಖದಿಂದ ನಮ್ಮನ್ನು
> ನೋಡಬೇಕು.
> ಧಾನ್ಯ ದ್ರಾಕ್ಷೆಗಳು ಸಮೃದ್ಧಿಯಾಗಿ ಬೆಳೆದ ಸುಗ್ಗಿ
> ಕಾಲದಲ್ಲಿ ಅವರಿಗಿರುವ ಸಂತೋಷಕ್ಕಿಂತಲೂ
> ನೀನು ನನ್ನ ಹೃದಯದಲ್ಲಿ ಹೆಚ್ಚಾದ ಆನಂದವನ್ನು
> ಉಂಟುಮಾಡಿದ್ದೀ.
> ನಾನು ನಿರ್ಭಯವಾಗಿರುವದರಿಂದ ಮಲಗಿಕೊಂಡು
> ಕೂಡಲೇ ನಿದ್ದೆ ಮಾಡುವೆನು;
> ಯಾಕೆಂದರೆ ಯೆಹೋವನೇ, ನಾನು ಯಾವ ಅಪಾಯವೂ
> ಇಲ್ಲದೆ ಸುರಕ್ಷಿತನಾಗಿರುವಂತೆ ನೀನು
> ಕಾಪಾಡುತ್ತೀ (ಕೀರ್ತನೆ 4:6-8).

ನಮ್ಮ ದಾರಿಯಲ್ಲಿ ಕಷ್ಟಗಳು ಬಂದಾಗ, ದೇವರಿಗೆ ವಿರುದ್ಧವಾಗಿ ನಮ್ಮ ಮುಷ್ಠಿ, ಅಥವಾ ಕೈಗಳನ್ನೆತ್ತಿ ದೇವರಿಗೆ ಪ್ರಾರ್ಥಿಸುವದು, ಸ್ತುತಿಸುವದು, ಮನವಿಯನ್ನು ಸಲ್ಲಿಸುವದು ಮಾಡು

ತ್ತೇವೆ. ದಾವೀದನು ಕಡೆಯದನ್ನೇ ಮಾಡಿದನು. ದೇವರನ್ನು ಅವನು ಅವಲಂಭಿಸಿದ್ದರಿಂದ ಕಷ್ಟದ ದಿನಗಳನ್ನು ಹಾದು ಬಂದನು.

## ಮುಕ್ತಾಯ

ನಮ್ಮ ಈ ಪಾಠದಲ್ಲಿ, ದೇವರ ಶಿಕ್ಷೆಯನ್ನು ಕೃಪೆಯಿಂದ ಹೇಗೆ ಸ್ವೀಕರಿಸಬೇಕು ಎಂದು, ಅನೇಕ ಸಲಹೆಗಳನ್ನು ನಾನು ನೀಡಿದ್ದೇನೆ. ಅವುಗಳಲ್ಲಿ ಈ ಕೆಳಕಂಡವುಗಳನ್ನು ಗಮನಿಸೋಣ:

ನಿನ್ನನ್ನು ದೇವರು ಶಿಕ್ಷಿಸುವಾಗ, ನೀನು ನಿನ್ನ ಭವಿಷ್ಯವನ್ನು ಆತನ ಕೈಗಳಿಗೆ ಒಪ್ಪಿಸಿಕೊಡು. ಆತನು ನಿನ್ನನ್ನು ತಳ್ಳಿಬಿಡದೆ ಕಾಯುವನು.

ನಿನ್ನ ಸಂಬಂಧವನ್ನು ದೇವರೊಂದಿಗೂ, ಮನುಷ್ಯರೊಂದಿಗೂ ಸರಿಪಡಿಸಿ ಕೊಳ್ಳುವದರ ಮೂಲಕ ಭವಿಷ್ಯದಲ್ಲಿ ಉಂಟಾಗುವ ಸಮಸ್ಯೆಗಳಿಗೆ ಸಿದ್ಧನಾಗು. ನಿನ್ನನ್ನು ಸಂತೈಸಿ ಪ್ರೀತಿಸುವ ಸ್ನೇಹಿತರಿಗಾಗಿ ದೇವರಿಗೆ ಸ್ತೋತ್ರಮಾಡು ಅವರನ್ನು ಮರೆಯದಿರು.

ನೀನು ಪಾಪದಲ್ಲಿ ತೊಳಲಾಡುವಾಗ, ನಿನ್ನನ್ನು ಸರಿಪಡಿಸಲು, ಗದರಿಸುವ ಸ್ನೇಹಿತರಿಗಾಗಿ ದೇವರಿಗೆ ಸ್ತೋತ್ರ ಮಾಡು.

ನಿನ್ನ ಉದ್ವೇಗವನ್ನು ತೋರ್ಪಡಿಸಲು ಹಿಂಜರಿಯದಿರು ಆದರೆ ನಿನ್ನ ಸ್ವಾರ್ಥದಲ್ಲಿಯೇ ಮುಳುಗಿರಬೇಡ.

ನಿನಗೆ ಸಂಭವಿಸಿದ ಕಾರ್ಯಗಳ ನಿಮಿತ್ತ, ಇತರರಿಗೆ ಉಂಟಾದ ತಾಪತ್ರಯಗಳ ಕುರಿತಾಗಿ ಯೋಚಿಸು ಮತ್ತು ನಿನ್ನ ಸ್ವಾರ್ಥವನ್ನು ತ್ಯಜಿಸು.

ನೋವುಗಳು, ನೀನು ಸ್ಪಷ್ಟವಾಗಿ ಆಲೋಚಿಸದಂತೆ ಮಾಡುತ್ತವೆ, ಇವುಗಳ ಬಗ್ಗೆ ಎಚ್ಚರವಾಗಿರು. ಮತ್ತು ಇತರರ ಸಲಹೆಯನ್ನು ಸ್ವೀಕರಿಸು, ಯಾಕೆಂದರೆ ಅವರು ಆ ಸನ್ನಿವೇಶದಲ್ಲಿ, ನಿನಗಿಂತಲೂ ಸ್ಪಷ್ಟವಾಗಿ ಯೋಚಿಸುವರು.

ನೀನು ನಿನ್ನ ಸ್ಥಿರ ಚಿತ್ತಕ್ಕೆ ಬರುವಾಗ, ನೀನು ಯಾರಿಗಾದರೂ ಅನ್ಯಾಯವಾಗಿ ನಡಕೊಂಡಿದ್ದರೆ, ಹೆಮ್ಮೆಯನ್ನು ತ್ಯಜಿಸಿ, ಅವುಗಳನ್ನು ಪುನ ಸರಿಪಡಿಸಿಕೋ.

ನೀನು ಶಿಕ್ಷೆ ಹೊಂದುವಾಗ ಇತರರು ಈ ಅವಕಾಶವನ್ನು ಉಪಯೋಗಿಸಿಕೊಳ್ಳದಿರಲಿ. ಮತ್ತು ಮುಯ್ಯಿ ತೀರಿಸದಂತೆ ಎಚ್ಚರವಾಗಿರು. ಶಿಕ್ಷೆಯ ಉದ್ದೇಶ, ಪರೀಕ್ಷೆಯೇ ಎಂದು ನೆನಪು ಮಾಡಿಕೋ. ನಾವು ಈ ಪರೀಕ್ಷೆಯಲ್ಲಿ ಜಯಹೊಂದಿದರೆ, ಉತ್ತಮವಾದ ಜನರಾಗುತ್ತೇವೆ.

ದಾವೀದನ ಮನೋಭಾವದ ಕುರಿತು ನಮಗೆ ಉತ್ತೇಜನವಾಗುತ್ತದೆ. ಅವನ ಪದಗಳನ್ನು ನೋಡಿರಿ. ಯೆಹೋವನ ದೃಷ್ಟಿಯಲ್ಲಿ ನನಗೆ ದಯದೊರಕಿದರೆ ನಾನು ಆತನನ್ನೂ ಆತನ ಆಲಯವನ್ನೂ ನೋಡವ ಹಾಗೆ ತಾನೇ ನನ್ನನ್ನು ಹಿಂದಕ್ಕೆ ಬರಮಾಡುವನು. "ಆತನು ನಿನ್ನಲ್ಲಿ ನನಗೆ ಇಷ್ಟವಿಲ್ಲವೆಂದು ತೋರಿಸಿದರೆ ತನಗೆ ಸರಿ ಕಂಡಂತೆ ಮಾಡಲಿ" (15:25, 26). ಮತ್ತು ದಾವೀದನು ಹೇಳಿದ್ದೇನೆಂದರೆ, "ನಾನು ನನ್ನನ್ನೆ ದೇವರ ಹಸ್ತಕ್ಕೆ ಒಪ್ಪಿಸಿಕೊಡುತ್ತೇನೆ, ಆತನಿಗೆ ಇಷ್ಟಬಂದಂತೆ ಮಾಡಲಿ. ಸತ್ಯವಾಗಿರುವದನ್ನೇ ನನ್ನಲ್ಲಿ ಮಾಡಲಿ ಎಂದು ಭರವಸೆ ಇಟ್ಟಿದ್ದೇನೆ" (ಕೀರ್ತನೆ 30:4, 5ನ್ನು ಗಮನಿಸಿ).

"ದೇವರೆ, ಶೋಧನೆಗಳು, ನಮಗೆ ಬರುವಾಗ ನಿನ್ನ ಸೇವಕನಾದ ದಾವೀದನಿಗೆ ಇದ್ದಂಥ ಮನೋಭಾವನೆಯನ್ನು ನಮಗೆ ನೀಡು. ನೀನು ದ್ವೇಷದಿಂದ ನಮ್ಮನ್ನು ಪರೀಕ್ಷಿಸದೆ, ನೀನು ನಮ್ಮನ್ನು ಪ್ರೀತಿಸುವದರಿಂದ ಇದನ್ನು ಮಾಡುತ್ತಿ. ದೇವರೇ ನೀನು, ನಮ್ಮ ಜೀವಿತದಲ್ಲಿ ನಿನ್ನ ಕಾರ್ಯಗಳನ್ನು ಮಾಡುವ ಸಮಯದಲ್ಲಿ ನಾವು ಪ್ರತಿಭಟಿಸಿದ್ದೇವೆ. ನಿನ್ನ ಶಿಕ್ಷೆಯನ್ನು *ಕೃಪಾಪೂರ್ಣವಾಗಿ* ಸ್ವೀಕರಿಸಲು ಸಹಾಯಿಸು ಯೇಸುವಿನ ನಾಮದಲ್ಲಿ ಆಮೆನ್."

ಟಿಪ್ಪಣಿಗಳು

[1]2 ಸಮುವೇಲ 15:18ರಲ್ಲಿ ಕಾಣಿಸಿರುವ 600 ಮಂದಿ ಇತ್ತೈಯಾರೊಂದಿಗೆ ಬಂದವರೋ ಅಥವಾ ಅರಣ್ಯದಲ್ಲಿ ದಾವೀದನೊಂದಿಗಿದ್ದ ಆರು ನೂರು ಜನರೊಡನೆ ಈ ವಿಷಯ ಅಸ್ಪಷ್ಟವಾಗಿದೆ. ಅವರು ನಂತರದಲ್ಲಿ ಬಂದವರು ಎಂಬುದು ನನ್ನ ಅಭಿಪ್ರಾಯ ಅನೇಕ ವಚನಗಳಲ್ಲಿ ಇತ್ತೈಯಾಂದಿಗಿದ್ದ ಮನುಷ್ಯರು ಎಂಬ ಬಹು ಪದವನ್ನು ಉಪಯೋಗಿಸಲಾಗಿದೆ, ಮತ್ತು ದಾವೀದನು ಇತ್ತೈಯನ್ನು ಮೂರನೆಯ ಸೈನ್ಯದ ಗುಂಪಿಗೆ ಸೇನಾಧಿಕಾರಿಯನ್ನಾಗಿ ನೇಮಿಸಿದ್ದರ ಕಾರಣ ಅವನೊಂದಿಗೆ ಜನರು ಇದ್ದರೂ ಎಂದು ಸೂಚಿಸುತ್ತದೆ. [2]ಯೆರೂಸಲೇಮಿನ ಅವರ ಗುಡಾರದ ಕುರಿತಾಗಿದೆ. [3]NIVಯಲ್ಲಿ "ಅವರೆಲ್ಲರೂ ಪಟ್ಟಣವನ್ನು ಬಿಡುವವರೆಗೆ ಅಬಿಯಾತರನು ಯಜ್ಞವನ್ನು ಅರ್ಪಿಸಿದನು ಎಂದು ತಿಳಿಸಲಾಗಿದೆ" (2 ಸಮುವೇಲ 15:24). [4]ದಾವೀದನು ಚಾದೋಕನನ್ನು "ದೇವದರ್ಶಿ" ಎಂದು ಕರೆದನು (2 ಸಮುವೇಲ 15:27). ಕರ್ತನ ಮಾತನ್ನು ತಿಳಿದುಕೊಳ್ಳುವದಕ್ಕಾಗಿ, ಅವನು ಕರೆ ಸಲ್ಪಟ್ಟಿದ್ದನು. ಅವನು ಊರೀಮ್ ಮತ್ತು ತಮ್ಮೀಮನ್ನು ಹೊಂದಿದ ಎಫೋದನ್ನು ಧರಿಸಿಕೊಂಡವನಾಗಿ ಕರ್ತನ ಮಾತನ್ನು ತಿಳಿಸುತ್ತಿದ್ದನು. "ಏನು" ನಡೆಯುತ್ತದೆ ಎಂಬುದಾಗಿ ತಿಳಿದುಕೊಳ್ಳಲು, ಚಾದೋಕನು ಉಪಯೋಗಿಸಲ್ಪಟ್ಟನು. [5]ನಿಮ್ಮಿಂದ ವರ್ತಮಾನವು ಬರುವ ತನಕ "ನಾನು ಅಡವಿಯಲ್ಲಿ ಹೊಳೆ ದಾಟುವ ಸ್ಥಳದ ಹತ್ತಿರ ಇರುವೆನು" ಎಂದು ದಾವೀದನು ಹೇಳಿದನು (2 ಸಮುವೇಲ 15:28). ಅದು ಯಾಜಕರಿಗೆ ತಿಳಿದಿದ್ದ; ಆಳವಿಲ್ಲದ ನೀರಿನ ಜಾಗ. [6]2 ಸಮುವೇಲ 15:32 ಹೇಳುತ್ತದೆ, "ದಾವೀದನು ಗುಡ್ಡದ ತುದಿಯಲ್ಲಿ ದೇವಾರಾಧನೆ ನಡೆಯುವ ಸ್ಥಳಕ್ಕೆ ಬಂದಾಗ." ಇದರ ಅರ್ಥ ದಾವೀದನು, ದೇವರನ್ನು ಆರಾಧಿಸುವದಕ್ಕೆ ನಿಂತನು ಅಥವಾ ಈ "ಉನ್ನತ ಪ್ರದೇಶಗಳಲ್ಲಿ" ದೇವರನ್ನು ಆರಾಧಿಸುತ್ತಿದ್ದರು. ದೇವಾಲಯವು ಕಟ್ಟಲ್ಪಟ್ಟಾಗ, ಈ ಉನ್ನತ ಪ್ರದೇಶಗಳನ್ನು ಬದಲಾಯಿಸಿದರು (ಆದರೆ ಅನೇಕ ಅರಸುಗಳು ಅದನ್ನು ಬದಲಾಯಿಸಲಿಲ್ಲ). [7]ಅರ್ಕಿಯರ ಗೊತ್ರದವರು, ದಕ್ಷಿಣ, ಪಶ್ಚಿಮದ ಬೇತೇಲಿನಲ್ಲಿದ್ದರು (ಯೆಹೋಶುವ 16:2). [8]2 ಸಮುವೇಲ 16:17. ಸಹ ನೋಡಿರಿ ಅನೇಕ ವಿದ್ವಾಂಸರು ಇದನ್ನು ವ್ಯವಸ್ಥೆಯ ನಾಮಾಂಕಿತ ಎಂದು ನಂಬಿದ್ದಾರೆ (1 ಅರಸು 4:5 ಗಮನಿಸಿ), ಇದು ಹೂಷೈಯ, ಮತ್ತು ದಾವೀದನ ಸಂಗಡವಿದ್ದ ಸರಳವಾದ ಸಂಬಂಧವಾಗಿತ್ತು. ದಾವೀದನ ಒಡ್ಡೋಲಗದಲ್ಲಿ ಯಾವುದೇ ಸ್ಥಾನಮಾನವನ್ನು ಹೂಷೈ ಹೊಂದಿದ್ದರು, ಅದು, ಅವನ ಮತ್ತು ದಾವೀದನ ಸ್ನೇಹಕ್ಕೆ ಅಡ್ಡಿ ಬರಲಿಲ್ಲ. ಬಹುಶ ಅವನ ವ್ಯಯಕ್ತಿಕ ವಾದ ಸ್ನೇಹದ ಸಂಬಂಧ, ದಾವೀದನಿಗೆ, ಅತಿ ಅವಶ್ಯವಾದ ಸೇವೆಯಾಗಿತ್ತು. [9]ಅತಿಸುಳ್ಳನ್ನು ಹೇಳುವಂಥ ಸಂದರ್ಭ ದಾವೀದನಿಗುಂಟಾಯಿತು. ಇನ್ನೊಂದು ಸಾರಿ ನಾನು ನಿಮಗೆ ತಿಳಿಸುವದೇನಂದರೆ ಬೈಬಲಿನಲ್ಲಿ ದಾಖಲಾಗಿರುವ ಈ ಸಂಗತಿಗಳನ್ನು ದೇವರು ಒಪ್ಪಿದ್ದಾನೆ ಎಂಬುದಾಗಿ ಅಲ್ಲ. ಬೈಬಲಿನಲ್ಲಿ ಈ ಕುರಿತಾಗಿ ಹೇಳಿದ ವಿಷಯಗಳನ್ನಾಗಲೀ, ಅಥವಾ ದಾವೀದನೂ ಅವನ ಸ್ನೇಹಿತರೂ ಮಾಡಿದ ಸಂಗತಿಗಳನ್ನು ನಾವು ಸಮರ್ಥಿಸಿಕೊಳ್ಳುವ ಅವಶ್ಯವಿಲ್ಲ. [10]50ನೇ ವರ್ಷದಲ್ಲಿ ಜುಡೋಸೋನಿಯಾ ಮತ್ತು ಅರ್ಕನ್‌ಸಾಸ್ ಪಟ್ಟಣಗಳು ಚಂಡಮಾರುತದಿಂದ ಸಂಪೂರ್ಣನಾಶವಾದವು. ನಿಮ್ಮ ಕೇಳುಗರು ಕೇಳುವಂತೆ, ಈ ದೃಷ್ಟಾಂತವನ್ನು ಉಪಯೋಗಿಸಿರಿ.

[11]ಮೆಫೀಬೋಶೆತನು ದಾವೀದನ ಪಂಕ್ತಿಯಲ್ಲಿ ಊಟ ಮಾಡುತ್ತಿದ್ದ ಕಾರಣ, ದಾವೀದನು ಯೆರೂಸಲೇಮನ್ನು ಬಿಡುವ ವರ್ತಮಾನದ ಆಜ್ಞೆಯನ್ನು ಒಬ್ಬ ಬಾಲಕನ ಮೂಲಕ ರವಾನೆ ಮಾಡಿದನು. [12]ಈ ಸುದ್ದಿಯು, ಬಹಳ ಉದಾಹರಣೆಗಳಿಂದ ಕೂಡಿರುತ್ತದೆ. ಬಡವರು ಮತ್ತು ವಯಸ್ಸಾದವರ ಆಸ್ತಿಯನ್ನು ಕಬಳಿಸುವವರ ಬಗ್ಗೆ ವ್ಯಾಪಾರ ಮಾಡುವ ಕುಶಲರು ವಯಸ್ಸಾದವರ ಆಸ್ತಿಯನ್ನು ಮೋಸದಿಂದ ಪಡಕೊಳ್ಳುವರು ದಾರ್ಮೀಕ/ಅಥವಾ ಸಹಾಯದ ಹಸ್ತ ತೋರುವ ಸಂಘಟನೆಗಳು ವಿದವೆಯರ ಆಸ್ತಿಯ ಕುರಿತು ಸ್ವ - ಇಚ್ಛೆಯಿಂದ ಆಸ್ತಿಯನ್ನು ನೀಡುವ ಪತ್ರವನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳುತ್ತಾರೆ. [13]ಆಕೀಷನಿಗೆ, ದಾವೀದನು ಸಹಾಯವನ್ನು ನೀಡಿದ್ದರಿಂದ, ಸೌಲನು ಅವನ ಮನೆಯವರು ನಾಶವಾದರು ಎಂದು ಶಿಮ್ಮಿಯು ತಿಳಿದಿದ್ದನು. ಮತ್ತು ಇದಕ್ಕೆ ದಾವೀದನೇ ಕಾರಣನು ಎಂದು ತಿಳಿದಿದ್ದನು. ಅಥವಾ ಈಷ್ಬೋಶೆತನ ಮರಣಕ್ಕೆ ದಾವೀದನೇ ಕಾರಣನು ಎಂದು ಅವನನ್ನು ಶಪಿಸಿದನು. ಅಥವಾ 2 ಸಮುವೇಲ 21:1-14ರಲ್ಲಿಯ ಘಟನೆಯು, ಈ ಹಿಂದೆಯೇ ಜರುಗಿತ್ತು, ಬಹುಶ ಈ ವಿಷಯವು ಶಿಮ್ಮಿಯ ಮನಸ್ಸಿನಲ್ಲಿತ್ತು. [14]"ಚೆರೂಯಳ ಮಕ್ಕಳೇ ನನಗೆ ನಿಮ್ಮಗೊಡವೆಯೇ ಬೇಡ" ಎಂಬ ಮಾತಿನ ಪೀಠಿಕೆಯನ್ನು ದಾವೀದನು ಹಾಕಿದ್ದನು (2 ಸಮುವೇಲ 16:10) ಚೆರೂಯಳು ದಾವೀದನ ಸಹೋದರಿಯಾಗಿದ್ದಳು. ಅಬಿಷೈ ಮತ್ತು ಯೋವಾಬನು "ಚೆರೂಯಳ ಗಂಡು ಮಕ್ಕಳು" ಯೋವಾಬನೂ ಸಹ ದಾವೀದನ ಜೊತೆಯಲ್ಲಿದ್ದನು (2 ಸಮುವೇಲ 18:2). "ನಿಮ್ಮ ಗೊಡವೆಯೇಬೇಡ," "ಹೊಂದಾಣಿಕೆಯಾಗದ ಕಾರ್ಯಗಳು." [15]2 ಸಮುವೇಲ 17:4, ಅಬ್ಷಾಲೋಮನ ಒಳಸಂಚಿನ ಯಶಸ್ಸನ್ನು ನೋಡುತ್ತೇವೆ. "ಇಸ್ರಾಯೇಲ್ಯರೆಲ್ಲರ ಹಿರಿಯರು ಇದ್ದರು" ಎಂದು

ಸೂಚಿಸುತ್ತದೆ. "ಇಸ್ರಾಯೇಲ್" ಎಂದರೆ ಎರಡು ಕುಲ ಮಾತ್ರವಲ್ಲ ಉಳಿದ ಹತ್ತು ಕುಲಗಳು ಎಂದು ತಿಳಿಸುತ್ತದೆ. [16]ಅಹಿತೋಫೇಲನು ಮತ್ತು ಈ ಕ್ರಿಯೆಗಳ ಬಗ್ಗೆ "ಮನುಷ್ಯನು ಏನು ಬಿತ್ತುತ್ತಾನೋ?" ಎಂಬ ಪಾಠದಲ್ಲಿರುವ ಈ ಪುಸ್ತಕದ ಹಿಂದಿನ ಅಧ್ಯಾಯದ ಟಿಪ್ಪಣಿಗಳನ್ನು ನೋಡಿರಿ. [17]ಅಹಿತೋಫೇಲನು ದಾವೀದನಿಗೆ "ಅರಸನು" ಎಂದನು; ಈ ವಯಸ್ಸಾದ ವ್ಯಕ್ತಿಗೆ ಸಿಂಹಾಸನದ ಮೇಲೆ ಯಾರು ಇರಬೇಕು ಎಂದು ತಿಳಿದಿತ್ತು. [18](ಯಾಜಕಕಾಂಡ 20:11; 1 ಕೊರಿಂಥ 5:1ನ್ನು ಸಹ ನೋಡಿರಿ) "ಇದು ದೇವರ ನಿಯಮಕ್ಕೆ ವಿರುದ್ಧವಾದದ್ದು. [19]2 ಸಮುವೇಲ 17:14 "ಒಳ್ಳೆಯ ಸಲಹೆ" ಎಂದು ಕರೆಯಲ್ಪಟ್ಟಿದೆ. ಅಬ್ಷಾಲೋಮನ ಅಂತ್ಯಕ್ಕೆ ಅದು ಒಳ್ಳೆಯದೇ. [20]ಅಬ್ಷಾಲೋಮನಿಗೆ ಯುದ್ಧದ ಅನುಭವವಿರಲಿಲ್ಲ ಆದುದರಿಂದಲೇ ಅಬ್ಷಾಲೋಮನು ಶಿರಸ್ತ್ರಾಣವನ್ನಾಗಲೀ, ಯುದ್ಧದ ಸಾಮಾಗ್ರಿಗಳನ್ನಾಗಲಿ ಅಥವಾ ಕತ್ತಿ, ಚಾಕು ಯಾವುದನ್ನೂ ಹೊಂದಿರಲಿಲ್ಲ, ಅಬ್ಷಾಲೋಮನ ನಾಶನಕ್ಕಾಗಿ ಹೂಷೈ ಈ ಸಲಹೆಗಳನ್ನು ನೀಡಿದ್ದನು.

[21]ಬೈಬಲಿನಲ್ಲಿ ತಿಳಿಸಿರುವ ನಾಲ್ಕು ಆತ್ಮಹತ್ಯೆಗಳಲ್ಲಿ ಇದು ಒಂದಾಗಿರುತ್ತದೆ, ಅವನ ಸಲಹೆಗೆ ಗೌರವ ಸಿಗದೆ ಇದ್ದಾಗ ಮತ್ತು ಇದರ ನಿಮಿತ್ತ ಅಬ್ಷಾಲೋಮನಿಗೆ ಅಪಜಯ ಖಂಡಿತ ಮತ್ತು ದಾವೀದನು ಹಿಂದರುಗಿ ಬಂದು ಅವನಿಗೆ ಮಾಡಬಹುದಾದ ಅಪಾಯದ ನಿಮಿತ್ತ ಆತ್ಮ ಹತ್ಯೆ ಮಾಡಿಕೊಂಡನು. (ನೋಡಿರಿ KJV, NIV) ಸೌಲನ ವಿಷಯವಾಗಿ ಮುಂದಿನ ಪಾಠಗಳಲ್ಲಿ ಕಲಿಯುವಾಗ, ದೇವರ ಚಿತ್ತವಾದರೆ ಆತ್ಮಹತ್ಯದ ಕುರಿತು ಆಳವಾಗಿ ವಿವರಿಸಲಾಗುವದು. [22]ದಾವೀದನಿಗೆ ವರ್ತಮಾನವನ್ನು ತಿಳಿಸುವ ವಿಸ್ತಾರವಾದ ಯೋಜನೆಯು ಸಿದ್ಧವಾಯಿತು (2 ಸಮುವೇಲ 15:34-36) ಇಬ್ಬರು ಗಂಡು ಮಕ್ಕಳು ಗೋಡೆಯ ಆಚೆ ಇದ್ದರು. ಯಾಕೆಂದರೆ ಅವರು ಪಟ್ಟಣವನ್ನು ಹೊಕ್ಕು, ಹೊರಹೋಗುವದು ಸಂದೇಹಕ್ಕೆ ಆಸ್ಪದವಾಗುತ್ತಿತ್ತು (2 ಸಮುವೇಲ 17:17). ಅವರಿಬ್ಬರು ಎನ್‌ರೋಗೆಲಿನಲ್ಲಿ ತಂಗಿದ್ದರು. ಅದು ಕಿದ್ರೋನ್ ತಗ್ಗಿನಲ್ಲಿತ್ತು ಅಲ್ಲಿ ನೀರಿಗಾಗಿ ದಾಸಿಯು ಹೋಗ ಬೇಕಿದ್ದರಿಂದ ಯಾರಿಗೂ ಸಂದೇಹವಾಗುತ್ತಿರಲಿಲ್ಲ. [23]ರಾಹಾಬಳ ಬಳಿ ಹಡಗಿಕೊಂಡಿದ್ದ ಇಬ್ಬರು ಗುಡಾಚಾರರ ಮನೋಹರವಾದ ಕಥೆಯನ್ನು ನೆನಪಿಸುತ್ತದೆ. [24]ನೀವು ಸ್ವಲ್ಪಹೊತ್ತು ತಡೆದು "ನನ್ನ ಕರ್ತನನ್ನು ಮೊರೆಯಿಡುತ್ತೇನೆ," ಎಂಬ ಯೌವನಸ್ಥರಿಗಾಗಿ ಬರೆಯಲ್ಪಟ್ಟ ಹಾಡನ್ನು ಹಾಡಬಹುದು. [25]ಇತ್ತೈಯು ಸೇನಾಧಿಕಾರಿಗಳಲ್ಲಿ ಒಬ್ಬನಾಗಿದ್ದನು. ಅವನು ದಾವೀದನಲ್ಲಿ ಇಟ್ಟಿದ್ದ ಯಥಾರ್ಥತೆಗೆ ಅವನಿಗೆ ಪ್ರತಿಫಲವುಂಟಾಯಿತು. [26]ಜೋಸೀಫಸ್‌ನು ತಿಳಿಸಿದಂತೆ ದಾವೀದನಿಗೆ ಬಹುಶ ಕೇವಲ ನಾಲ್ಕು ಸಾವಿರ ಸೈನಿಕರು, ಇದ್ದರು. [27]2 ಸಮುವೇಲ 17:24-26 ಅಬ್ಷಾಲೋಮನು ಅಮಾಸನನ್ನು ಸೇನಾಪತಿಯನ್ನಾಗಿ ಮಾಡಿದನು. ಅಮಾಸನು ದಾವೀದನ ಸಹೋದರನ ಮಗನೂ, ಅಬ್ಷಾಲೋಮನಿಗೆ ಅವನ ಚಿಕ್ಕಪ್ಪನ ಮಗನು, ಆಗಿದ್ದನು. [28]"ಚದುರಂಗದ" ಆಟದಲ್ಲಿ, ರಾಜನನ್ನು ವಶಪಡಿಸುವದು ಬಹಳ ಪ್ರಾಮುಖ್ಯವಾದದ್ದು ಇತರರನ್ನು ಕಳಕೊಂಡು, ಅರಸನನ್ನು ಕಳಕೊಳ್ಳದೆ, ವಿರೋಧಿ ಅರಸನನ್ನು ವಶಪಡಿಸಿಕೊಳ್ಳುವದು, ಇಲ್ಲಿ ಇದೇ ಸನ್ನಿವೇಶವುಂಟಾಗಿತ್ತು. [29]ಸಹಜವಾಗಿ ಅರಸನಾದ ದಾವೀದನನ್ನು ಕಾಯಲು, ಸೈನ್ಯದ ಚಿಕ್ಕ ತುಕಡಿಯವರು ಹೋಗಿ ಅವನ ಜೊತೆಯಿದ್ದರು. ಸಂದರ್ಭ ಬಂದರೆ ಯುದ್ಧ ಮಾಡುತ್ತಿರುವವರ ಬಳಿಗೆ ಸಹಾಯ ಮಾಡಬೇಕಿತ್ತು. [30]ಸಿದ್ಧಗೊಳ್ಳದೆ ಇದ್ದಂಥ ಅಬ್ಷಾಲೋಮನ ಸೈನ್ಯದ ಮೇಲೆ ದಾವೀದನ ಸೈನ್ಯದವರು ದಾಳಿಮಾಡಿ, ಅವರನ್ನು ಅರಣ್ಯದಲ್ಲಿ ಚದುರಿಸಿದರು, ಎಂದು ಜೋಸೀಫಸ್‌ನು ಬರೆ ದಿದ್ದಾನೆ.

[31]"ಎಫ್ರಾಯಿಮ್ಯರ ಅರಣ್ಯ ಎಂದು" ಅರಣ್ಯಕ್ಕೆ ಕರೆಯಲಾಯಿತು, ಆದರೆ ಯುದ್ಧವು ನಡೆದದ್ದು ಮಾತ್ರ ಗಿಲಿಯಾದಿನಲ್ಲಿ (17:26), ಅದು ಯೊರ್ದನ್‌ನಿಗೆ ಪೂರ್ವದಿಕ್ಕಿನಲ್ಲಿತ್ತು. ಆದರೆ ಎಫ್ರಾಯಿಮ್ ಯೊರ್ದನ್‌ನಿನ ಪಶ್ಚಿಮ ದಿಕ್ಕಿನಲ್ಲಿತ್ತು. ಅಲ್ಲಿ 42,000 ಸಾವಿರ ಮಂದಿ ಎಫ್ರಾಯೀಮ ಸೈನಿಕರು ಮರಣ ಹೊಂದಿದ್ದರಿಂದ "ಅವರ ನೆನಪಿನಾರ್ಥವಾಗಿ" "ಎಫ್ರಾಯಿಮ್ಯರ ಅರಣ್ಯ" ಎಂದು ಕರೆಯಲಾಯಿತು (ನ್ಯಾಯಸ್ಥಾಪಕರು 12:1-6). [32]ಕತ್ತಿಗಿಂತಲೂ, "ಅರಣ್ಯವು ಹೆಚ್ಚು ಜನರನ್ನು ಸಂಹರಿಸಿತು" ಎಂಬ ಮಾತು ಉಂಟು (2 ಸಮುವೇಲ 18:8). ಸೈನಿಕರು ಅರಣ್ಯದ ತಗ್ಗುಗಳಲ್ಲಿ ಬಿದ್ದು, ಕಾಡು ಪ್ರಾಣಿಗಳು ಅವರನ್ನು ತಿಂದು ಹಾಕಿದ್ದರಿಂದ, ಈ ಮಾತು ಉಂಟಾಯಿತು (2 ಸಮುವೇಲ 18:17ನ್ನು ನೋಡಿರಿ). [33]ಅಲ್ಲಿದ್ದ 20 ಸಾವಿರ ಸೈನಿಕರು ಅಬ್ಷಾಲೋಮನವರು ಅಥವಾ ಒಟ್ಟಾಗಿ 20 ಸಾವಿರ ಎಂಬುದು ಸ್ಪಷ್ಟವಿಲ್ಲ, ಮೊದಲನೆಯದೇ ಸರಿ ಇರಬಹುದು ಎಂದು ನಾನು ಊಹಿಸುತ್ತೇನೆ. [34]ಕೂಷ್ ಎಂಬದು ನೈಲ್ ನದಿಯ ಮೇಲಿದ್ದ ಒಂದು ಸ್ಥಳ, ಅದು ಈಜಿಪ್ಟಿನ ದಕ್ಷಿಣ ದಿಕ್ಕಿನಲ್ಲಿತ್ತು, ಈಗ ಅದನ್ನು ಎಥಿಯೋಪಿಯಾ ಮತ್ತು ಸುಡಾನ್ ಎಂದು ಕರೆಯುತ್ತಾರೆ. [35]ಯೋವಾಬನೇ, ಅಬ್ಷಾಲೋಮನನ್ನು ಕೊಂದವನು ಎಂದು ದಾವೀದನಿಗೆ ಸ್ಪಷ್ಟವಾಗಿರಲಿಲ್ಲ (1 ಅರಸು 2:5, ನೋಡಿರಿ). ಯೋವಾಬನ ದಿಟ್ಟತನದ, ಮಾತುಗಳು ದಾವೀದನಿಗೆ ಈ ವಿಷಯವನ್ನು ಮರಮಾಚಿರಬಹುದು ಎಂದು ಯೋವಾಬನು ತಿಳಿದಿದ್ದನು. [36]ಯೋವಾಬನು ಮಾಡಿದ ಈ ಕ್ರಿಯೆಯಲ್ಲಿ ಎರಡು ವಿಷಯಗಳು ಅಗಿರಬಹುದು. ದಾವೀದನ

ಕುರಿತಾಗಿ ಯೋಚಿಸುವುದರ ಜೊತೆಯಲ್ಲಿ ದೇಶದ ವಿಷಯವಾಗಿಯೂ, ತನ್ನ ಸ್ಥಾನದ ಬಗ್ಗೆಯೂ ಯೋಚಿಸುತ್ತಿದ್ದನು. ಹೇಗೂ ಅವನ ಮಾತುಗಳು ದಾವೀದನಿಗೆ ಅವಶ್ಯವಾಗಿದ್ದವು. [37]ಜನರೊಟ್ಟಿಗೆ "ಸೌಮ್ಯವಾಗಿ ಮಾತನಾಡು" ಎಂದು ಯೋವಾಬನು ದಾವೀದನಿಗೆ ಸವಾಲು ನೀಡಿದ್ದನು (2 ಸಮುವೇಲ 19:7). ಅದರ ಅರ್ಥ, ಜನರ "ಹೃದಯದೊಂದಿಗೆ ಮಾತನಾಡು" ಎಂಬದೇ - ಜನರ ಕೊರತೆಗನುಗುಣವಾಗಿ ಮಾತನಾಡು. LB ಈ ರೀತಿ ಹೇಳುತ್ತದೆ, "ಹೊರಗೆ ಹೋಗಿ ಸೇನೆಯನ್ನು ಅಭಿನಂದಿಸು." [38]ದಾವೀದನಿಗೆ "ತನ್ನ - ದೇಹದಲ್ಲಿದ್ದಂಥ ಇನ್ನೊಂದು ಮುಳ್ಳನ್ನು" ತೆಗೆಯುವ ಕಾರ್ಯವಿತ್ತು. ಯೋವಾಬನು ರಾಜತಂತ್ರವಿಲ್ಲದ ರೀತಿಯಲ್ಲಿ ದಾವೀದನಿಗೆ ನಡಕೊಂಡದ್ದಕ್ಕೆ ಅವನು ಬೇಸರ ಪಟ್ಟಿದ್ದನೋ? ಬಹುಶ ಅಬ್ಷಾಲೋಮನನ್ನೂ ಯೋವಾಬನೇ ಸಂಹರಿಸಿದನು ಎಂದು ದಾವೀದನಿಗೆ ತಿಳಿದಿತ್ತೋ? 1 ಅರಸು 2:5ರಲ್ಲಿ ಬಹುಶ (ದಾವೀದನು ಯೋವಾಬನು ಮಾಡಬಾರದ ಕ್ರಿಯೆಗಳ ವಿಷಯದಲ್ಲಿ ನಮೂದಿಸಿರುವದಿಲ್ಲ). [39]ಮುಂದಿನ ಪಾಠದಲ್ಲಿ ಭೆರ್ಜಿಲ್ಲೈ ಬಗ್ಗೆ ದಾಖಲು ಮಾಡಲಾಗಿದೆ. ಆದರೆ ದಾವೀದನು ಯೋರ್ದಾನ್ ಹೊಳೆಯನ್ನು ದಾಟುವದಕ್ಕಿಂತ *ಮೊದಲೇ* ಈ ವಿಷಯ ಜರುಗಿತ್ತು (2 ಸಮುವೇಲ 19:33, 39) ನಾನು ಕ್ರಮವಾಗಿ ತೋರಿಸುವದಕ್ಕಾಗಿ ದಾಖಲಿಸಿದ್ದೇನೆ. [40]ಜೋಸೀಫಸನನ ಬರವಣಿಗೆಯಲ್ಲಿ ಕಿಮಾಮನು ಬರ್ಜಿಲ್ಲೈಯ ಮಗನು ಎಂದು ಹೇಳಲಾಗಿದೆ. ಸೆಪ್ಟಜೂಯಂಟ್ ಲೇಖನ 1 ಅರಸನು 2:7ರಲ್ಲಿ ಇದಕ್ಕೆ ಬೆಂಬಲನೀಡಿದೆ.

[41]ಅವರನ್ನು ದೋಣಿಯಲ್ಲಿ ಸಾಗಿಸಿದರು ಎಂದು ಯೆರುಸಲೇಮ್ ಬೈಬಲ್ ತಿಳಿಸುತ್ತದೆ. [42]ಬೈಬಲಿನಲ್ಲಿ ಸಿಗುವ ಕೆಲವೇ ವ್ಯಕ್ತಿಗಳ ಗುಂಪಿಗೆ ಸೇರಿದ ಶಿಮ್ಮಿಯು ಈ ಮಾತುಗಳನ್ನಾಡಿದನು. ಅವನ ಕಾರ್ಯದ ಪರಿಣಾಮವನ್ನು ನೆನೆದು ಈ ರೀತಿ ಸಹಜವಾಗಿ ಮಾತನಾಡಿದನು. [43]"ಯೊಸೇಫ್ಯರಲ್ಲಿ" (2 ಸಮುವೇಲ 19:20) ಎಂಬ "ಬಾವವನ್ನು" ಉಪಯೋಗಿಸಲಾಗಿದೆ ಎಫ್ರಾಯೀಮ್ ಮತ್ತು ಮನಸ್ಸೆ, ಈ ಎರಡು ಯೋಸೇಫನಿಂದ ಉಂಟಾದ ಕುಲಗಳು ಆ ಕುಲಗಳು ಅತಿ ದೊಡ್ಡದಾಗಿದ್ದು ಉತ್ತರದ ಕುಲಗಳಲ್ಲಿ ವರ್ಚಸುಳ್ಳನ್ನು ಹೊಂದಿದ್ದರು. "ಈ ಉತ್ತರದ ಕುಲಗಳಿಗೆ ಯೋಸೇಫರು" ಎಂದು ಕರೆಯುತ್ತಿದ್ದರು. [44]ದಾವೀದನು ಅವನ ಮೇಲೆ ಭರವಸೆ ಇಡದೇ ಇದ್ದದ್ದರಿಂದ ಅವನ ಮರಣದ ಹಾಸಿಗೆಯಲ್ಲಿರು ವಾಗ, ಅವನು ಸೊಲೋಮೋನನಿಗೆ ನೀಡಿದ ಸಲಹೆಯು, ಶಿಮ್ಮಿಯ ಮರಣದಲ್ಲಿ ಅಂತ್ಯವಾಯಿತು (1 ಅರಸು 2). [45]ತಪ್ಪು ಸರಿಗಳನ್ನು ನಿರ್ಧರಿಸುವದರಲ್ಲಿ, ದಾವೀದನು "ದೇವರ ದೂತನಂತಿದ್ದನು" ತೆಕೋವದ ಸ್ತ್ರೀಯು ಸಹ ಇದೇ ರೀತಿಯಾಗಿ ವಿವೇಕದಿಂದ ಮಾತನಾಡಿದಳು (2 ಸಮುವೇಲ 14:17). [46]ಸ್ತ್ರೀಯು ಎರಡು ಮಕ್ಕಳ ವ್ಯತ್ಯಾಸದ ಕಥೆಯನ್ನು ಹೇಳುವಾಗ, ದಾವೀದನು ತಾಯಿಯ ಸ್ಥಾನದಲ್ಲಿದ್ದನು. ಒಬ್ಬನು ತನಗೆ ಸುಳ್ಳನ್ನು ಹೇಳುತ್ತಿದ್ದಾನೆ ಎಂದು ತಿಳಿಯ ಬಹುದು ಅದಕ್ಕೆ ಸರಿಯಾದ ಕಾರಣವಿಲ್ಲದೆ ಹೋದರೆ, ಇಬ್ಬರನ್ನೂ ಒಂದೇ ರೀತಿಯಲ್ಲಿ ಪರಿಗಣಿಸಬಹುದು.